ಕೊರವಂಜಿ



Koravanji

ಡಿಸೆಂಬರ್

೧೯೬೧

★

ಸಂಪಾದಕರು

ಶ್ರೀ|| ರಾ. ಶಿ.

ಬರೆಹಗಾರರು :

ಶ್ರೀ|| ಕವಿಕುಲಲಾಮ

ಶ್ರೀಮತಿ ಟಿ. ಸುನಂದಮ್ಮ

ಶ್ರೀ|| ಅ. ರಾ. ಸೇ.

ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಬಿಡಿಪ್ರತಿ

ಇದೇ ತಿಂಗಳಲ್ಲಿ ಪ್ರದರ್ಶನ

ಕರ್ನಾಟಕಾದ್ಯಂತ

ನಿಮ್ಮ ನೆಚ್ಚಿನ ಚಿತ್ರಮಂದಿರಗಳಲ್ಲಿ



——ಕಟಕ.——

ಕೊರವಂಜಿ

A. ANANTHIAH.

ಸಂಪುಟ ೨೦ ಡಿಸೆಂಬರ್ ೧೯೬೧ ಸಂಚಿಕೆ ೯

★ ಕುಹಕಿಡಿಗಳು ★

ಮಾನ್ಯ "ಮಂಕು ತಿಮ್ಮ"ನಿಗೆ ಡಾಕ್ಟರೇಟ್ ಪದವಿ ಕೊಡುವ ಪುಣ್ಯ ಲಭಿಸಿದ್ದಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ನಮ್ಮ ಅಭಿನಂದನೆಗಳು.

* * * *

ತಾಜಮಹಲನ್ನು ನೋಡಿ ಬಂದಮೇಲೆ ನಮ್ಮಾಕಿ "ನೋಡಿ ಅಂದ್ರೆ. ಅಂಥ ಬಂಗಲೇನ ಕಟ್ಟಿಸಿಕೊಟ್ಟ, ಅವಳ ಗಂಡ. ಅಡಿಗೆ ಮನೇಲಿ ಕೈಗೆ ಎಟಕೋ ಹಾಗೆ ಒಂದು ಬಡು ಹಾಕಿಸ್ಕೊಡಿ ಅಂತ ಅಷ್ಟು ದಿನದಿಂದ ಕೇಳಿಕೋತೀನಿ. ನೀವು ಸುಮ್ಮಗೆ ಇದೀರಿ" ಎಂದಳು.

"ಅವಳ ಹಾಗೇ ನೀನೂ ಸಾಯೆ! ನಿನಗೂ ಹಾಗೇ ದಿವ್ಯವಾದ ಗೋರಿ ಕಟ್ಟಿಸಿ, ಕೈಗೆ ಎಟಕೋ ಹಾಗೆ ಅದರಲ್ಲಿ ಬಡು ಹಾಕಿಸ್ತೀನಿ" ಅಂತ ಹೇಳಬೇಕೂಂತ. ಧೈರ್ಯ ಬರಲಿಲ್ಲ. ತೆಪ್ಪಗೇ ಇದ್ದೆ.

* * * *

ಹಿಮಾಲಯದ ಗಡಿ ಸಂರಕ್ಷಣೆಗೆ ಸೈನ್ಯಸಚಿವರು ಚೀಣಾದಿಂದ ವಿಮಾನಗಳನ್ನು ಕೊಂಡುಕೊಳ್ಳುತ್ತಾರೆ ಎನ್ನುವುದು ಶುದ್ಧ ಕುಹಕ.

* * * *

ಪೋರ್ಕ್ಸಾಸ್ ಸಿಟಿಯಲ್ಲೊಬ್ಬಾತ ಬಾಜಿ ಕಟ್ಟಿ ಗೆದ್ದು, ಹಣ ಬಂದಾಗ, ನಕ್ಕು, ನಕ್ಕು ಸತ್ತೇಹೋದನಂತೆ.

—ಪುಣ್ಯವಂತ! ನಮ್ಮ ಹಾಗೆ ಕುದುರೆ ಬಾಲಕ್ಕೆ ಬಾಜಿ ಕಟ್ಟಿ ಸೋತು, ಅತ್ತೂ ಅತ್ತೂ ಉಳಿದುಕೊಳ್ಳಲಿಲ್ಲ.

* * * *

ಹೊಸದಾಗಿ ಪಾಸಾದ ವೈದ್ಯರನ್ನ ಒಂದು ವರ್ಷ ಹಳ್ಳಿಗಳಿಗೆ ಕಡ್ಡಾಯವಾಗಿ ಕಳಿಸುತ್ತಾರಂತೆ.

—ತುಂಬಾ ಒಳ್ಳೆ ಪ್ರಯೋಗ! ಭಾರತದ ಜನಸಂಖ್ಯೆಯನ್ನು ಹತೋಟಿ ಯಲ್ಲಿಡಲು ಇದು ಬಲು ಒಳ್ಳೆ ಪ್ರಯೋಗ!

* * * *

ನಾಯಕರ ಭೇಟಿ—ಸಂಯುಕ್ತ ಹೇಳಿಕೆ—ಇವೇ ಪತ್ರಿಕೆ ತುಂಬಾ!

—ಯಾರ್‍ಯಾರು ಫೋಟೊ! —ಮುಚ್ಚಿಟ್ಟಿದ್ದು ಎಷ್ಟು—ಇಲ್ಲವೇ ಇಲ್ಲ ಪತ್ರಿಕೇಲಿ.

* * * *

ಎಂ. ಸಿ. ಸಿ. ಕ್ರಿಕೆಟ್ ತಂಡದವರು ಮಸೀದಿಯ ಹತ್ತಿರ ಕಲ್ಲುಚಪ್ಪಡಿ ಯೊಂದನ್ನು ಮುಟ್ಟಿದಾಗ, ಮೌಲ್ವಿಯು ಆಣತಿ ಇತ್ತಾಗ, ಆ ಚಪ್ಪಡಿ ಗಾಳಿಯಲ್ಲಿ ಹಾಗೇ ಎದ್ದಿತಂತೆ. ಇದನ್ನು ಕಂಡು ಆಶ್ಚರ್ಯಪಟ್ಟರಂತೆ.

—ಆಟ ಆಡೋವಾಗ ನಮ್ಮ ತಂಡದವರು ಕೈಗೆ ಇಳಿದ ಕ್ಯಾಚ್ ಬಿಟ್ಟರಂತೆ. ಇದನ್ನು ಕಂಡು ಇನ್ನೂ ಆಶ್ಚರ್ಯಪಟ್ಟರಂತೆ.

* * * *

"ಪತ್ರಿಕೆಗಳಲ್ಲಿ ಬಂದ ಸುದ್ದಿಯೆಲ್ಲಾ ಉತ್ಪ್ರೇಕ್ಷೆ. ಚೀನೀಯರು ೨,೦೦೦ ಚ| ಮೈಲಿ ಹೊಸದಾಗಿ ಆಕ್ರಮಿಸಿಲ್ಲ. ಸ್ವಲ್ಪ ಮುಂದುವರಿದು ಬಂದಿದ್ದಾರೆ" ಎಂದರಂತೆ ಪ್ರಧಾನಿಗಳು.

—ಅಂದರೆ ೧,೯೦೦ ಚ| ಮೈಲಿ ಇರಬಹುದೇ?

* * * *

ಭಾರತಕ್ಕೆ ಗಗರಿನ್‌ರವರು ಇಳಿದು ಬರ್ತಾರೆ ಅನ್ನುವ ಸುದ್ದಿಯನ್ನು ಕೇಳಿ, ನಮ್ಮ ಕೇರಿ ಕಮ್ಯೂನಿಸ್ಟರು ಗಗನಕ್ಕೇ ಹಾರಿ ಹೋಗ್ತಿದಾರೆ.

* * * *

ನಾಲ್ಕು ವಿದೇಶಗಳಲ್ಲಿ ಪ್ರವಾಸ ಮಾಡಿದ ಅರ್ಥಸಚಿವ ಮೊರಾರ್ಜೀಯವರು ಆರು ಪೌಂಡುಗಳಷ್ಟು ಹಣವನ್ನು ಅಲ್ಲೆಲ್ಲ ಸೇವಕರಿಗೆ ಬಹುಮಾನವಾಗಿ ಕೊಟ್ಟರಂತೆ.

—ಈಗ ಅವರನ್ನು 'ದಾನಶೂರ ಕರ್ಣ' ಎಂದು ಕರೆಯಬಹುದು.

* * * *

ಕನ್ನಡವೇ ಆಡಳಿತ ಭಾಷೆಯಾಗಬೇಕು ಅಂತ ಕನ್ನಡದಲ್ಲಿ ಮಾತನಾಡಿದವ ರೆಲ್ಲ ಸಪ್ಪೆಸಪ್ಪೆಯಾಗೇ ಮಾತಾಡಿದರು.

—ಆದರೆ, ಕನ್ನಡ ಮಾಧ್ಯಮವಾಗಲೇ ಬೇಕು ಅಂತ ಇಂಗ್ಲೀಷಿನಲ್ಲಿ ಜಮಾಯಿಸಿದವರು, ಬಲು ರೋಷಾವೇಶದಿಂದ ಮಾತನಾಡಿದರು— ಎಂದೊಬ್ಬ ವೀಕ್ಷಕರು ಬರೆದಿದ್ದಾರೆ.

ಕೈಲಾಸಂ

— ನೆನಪಿನ ತರ್ಪಣ —

ಚಿಗುರು ಮೀಶೆ ಬರುತ್ತಿದ್ದ ಪ್ರಾಯ. ಕಾಲೇಜಿನಲ್ಲಿ ಓದುತ್ತಿದ್ದೆ. ಒಂದು ಸಂಜೆ ಬಲು ಬೇಜಾರಾಗಿತ್ತು, ಅಪ್ಪಿಯ ಜತೆಗೆ ನಡೆದಾಡುತ್ತ ಹೊರಟೆದ್ದೆ. ನಿರ್ದಿಷ್ಟ ಯೋಚನೆಯೊಂದೂ ಇರಲಿಲ್ಲ. ಬೆಂಗಳೂರಿನ ಕಲಾಸಿಪಾಳ್ಯದಲ್ಲಿ, ಪಯಣಿಗರಿಗಾಗಿ ಬಸ್ ನಿಲ್ದಾಣವಿದೆ ನೋಡಿ, ಅಲ್ಲಿ ಆಗ ರತ್ನಾವಳಿ ನಾಟಕಮಂದಿರವಿತ್ತು. ಆ ಸಂಜೆ ಅಲ್ಲಿಯ ರಸ್ತೆಯತ್ತ ಸಾಗಿದ್ದೆವು ನಾಟಕಮಂದಿರದಲ್ಲಿ ವಿವಿಧ ವಿನೋದಾವಳಿ ಇತ್ತು. ನಾಟಕಕ್ಕೆ ಹೋಗೋಣವೊ ಎಂದ ಅಪ್ಪಿ. ಎರಡು ಪಾವಲಿ ಇದೆಯೇನೊ ಎಂದು ನಾನು ಕೇಳಿದೆ, ಹ್ಞಾ ನೋ ಅಂದ. ಇಬ್ಬರೂ ಒಳಕ್ಕೆ ಹೋದೆವು. ಈಗ ನಿಮಗನ್ನಿಸಬಹುದು, ಒಂದು ಪಾವಲಿ ಕೊಟ್ಟು ನಾಟಕ ನೋಡಿದ್ದನ್ನ ಯಾಕೆ ಹೇಳ್ತಾನೆ ಮಹರಾಯ ಅಂತ. ಆದರೆ ಆಗಿನ ಕಾಲದಲ್ಲಿ ಒಂದು ಪಾವಲಿ ಕೊಟ್ಟರೆ ಪ್ರಾಯದ ಹಸಿವಿನ ನಮಗೆ ಸಣ್ಣ ತೂತಿನ ದೊಡ್ಡ ವಡೆಗಳು ಹದಿನಾರು ಸಿಕ್ಕುತಿದ್ದವು. ಈಗ ೨೫ ನಯೆಪೈಸೆ ಕೊಟ್ಟರೆ ೨೫ ದೊಡ್ಡ ತೂತಿನ ಸಣ್ಣ ವಡೆಗಳು ಸಿಗುತ್ತವೆ ನಮ್ಮ ವೊಮ್ಮಕ್ಕಳ ಹೊಟ್ಟೇನೂ ತುಂಬುಲ್ಲ. ಆ ಕಾಲದಲ್ಲಿ ಪಾವಲಿ ತೆರೋದು ಅಂದರೆ ಬಲಿದಾನ ಮಾಡಿದ ಹಾಗೇನೇ ನಮಗೆ, ಅದಕ್ಕೇ ಹೇಳಿದೆ. ಪಾವಲಿ ಕೊಟ್ಟೋರೆಲ್ಲ ನಮ್ಮ ಹಾಗೆ ಹಿಂದಾಗಡೆ ಚಾಪೆ ಮೇಲೆ ಕೂರುತ್ತಿದ್ದೆವು. ನಾಟಕ ಶುರುವಾಯ್ತು ತಿಪ್ಪಾರ್‍ಹಳ್ಳಿ ಹಾಡನ್ನು ಕೇಳಿದೆವು. ಪೂರ್ವದ ತಿರುಳನ್ನು ಪಶ್ಚಿಮದ ಹಾಡಿನ ಧಾಟಿಯಲ್ಲಿ ಕೇಳಿದ ನಾವಿಬ್ಬರೂ ಪುಳುಕಿ ಕುಕ್ಕುರುಗಾಲಿನಲ್ಲಿ ಕೂತೆವು.

ನಂತರ ಕಾಲ ತುಂಬುವುದಕ್ಕೋಸ್ಕರ ಸೀನುಗಳ ಅಂತರದಲ್ಲಿ ಒಬ್ಬ ನಟ ರಂಗದ ಎಡಗಡೆಯಿಂದ ಪ್ರವೇಶಿಸಿ ಆ ತುದಿಯಲ್ಲೇ ಬೇಸರ ತುಂಬಿದವನಂತೆ ನಿಂತು, There was an old woman who lived in a shoe. She had too many children, she did'nt know what to do ಎಂದು ಹಾಡಿದ. ಮೆಲ್ಲಗೆ ರಂಗದ ಈ ತುದಿಗೆ ಬಂದು ನಿಂತು, ಉತ್ಸಾಹಗೊಂಡವನಂತೆ There was another old woman who lived in another shoe. She had no children. But she knew ಅಂತ ಆ ಪದ್ಯ ಮುಗಿಸುವುದಕ್ಕೆ ಮುಂಚೆಯೇ ನಾನು ಗಹಗಹಿಸಿ ನಗಲಾರಂಭಿಸಿದೆ. "ನಿನ್ನ ಹಾಳು ನಗುವಿನಲ್ಲಿ ಅವನು ಏನು ಹೇಳ್ತಾ ಇದ್ದನೋ ಕೇಳಿಸಲಿಲ್ವಲ್ಲೊ ಎಂದು

ಅಪ್ಪಿ ಬೇಗಿದ. ಅಪ್ಪಿ ಒಲವಿನ ಮಗು ಮೂರುತಿ. ಮನೆಗೆ ಹಿಂತಿರುಗುವಾಗ ಚರಣವನ್ನು ಪೂರ್ಣಮಾಡಿ ಹೇಳಿದೆ.

ಆ ನಟ ಕೈಲಾಸಂ ಅಂತ ಹೇಳಬೇಕೇ ?

ಥೆಗಡಿ ಆಗಿದೆ ಥೆಶ್ಕ ಕೊಡ್ರೋ ಅಂದರೆ ಲಲಗೇ ಇಲ್ಲ ಲಿಲಗೆಲ್ಲೊ ಎಂದು ಹೇಳಿದಾಗ, ಮುಖ್ಯ ಅತಿಥಿ ಚಟ್ಟೋಪಾಧ್ಯಾಯರ ಮುಂದೆ ವೈದ್ಯನು ನುಗ್ಗಿದಾಗ, ಕಾರ್ಯಕರ್ತರು ಅವರನ್ನು ತಡೆದಾಗ, ಡಾಕ್ಟರು ಮುಂದಿದ್ದರೇ ಚಟ್ಟೋಪಾಧ್ಯಾಯರು ಸಹಜವಾಗಿ ಹಿಂದೆ ಬರಬೇಕು ಎಂದು ನುಡಿದಾಗ

ಕೈಲಾಸಂ ತೋರಿಸಿದ ವಂಡರ್ ಕಣ್ ದೃಷ್ಟಿಯೇ

ಸಾವಿನ ಭಯದಿಂದ ಶಿವಲಿಂಗವನ್ನಪ್ಪಿ ಪೂಜಿಸುತ್ತ ಕುಳಿತ ಮಾರ್ಕಂಡೇಯನಿಗೆ ಶಿವ ಪ್ರತ್ಯಕ್ಷನಾಗಿ, ಚಿರಂಜೀವಿಯಾಗು ಎಂದು "ಶಪಿಸಿದಾಗ"

ಅರಸಿತಿ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದರೂ ಬೆಳೆಯುವಾಗ ಮಿನುಗಾರನ ಮನೆಯಲ್ಲಿ ಬಾಳ ಪಾಠಗಳನ್ನು ಕಲಿತುದರಿಂದ, ಅಂತಹ ಗುರು ದೊರಕಿದರೂ, ಕಳಂಕದ ಮನಸ್ಸಿದ್ದುದರಿಂದ ಗುರಿ ಸಾಧಿಸಲಾರದೆ ಹೋದ ಕರ್ಣನ ದುರಂತ ಜೀವನವನ್ನು ಬಣ್ಣಿಸಿ ನಟಿಸಿದಾಗ,

ಆ ನಗೆಗಾರ ಕೈಲಾಸಂನ ವಂಡರಕಣ್ ದೃಷ್ಟಿಯೇ ಕಾಣಬರುತ್ತದೆ.

ಈ ದೃಷ್ಟಿಯಿಂದಲೇ ನಾಟಕಕಾರ ಕೈಲಾಸಂ, ಸುತ್ತಲಿನ ಸಮಾಜವನ್ನು ನೋಡಿ, ಮೂಲಭೂತ ಕುಂದು ಕೊರತೆಗಳನ್ನು ಕಂಡು, ಭೂತ ಕನ್ನಡಿಯಲ್ಲಿ ನಗು ನಗಿಸುತ್ತಾ ತೋರಿಸಿದ. ಸಮಾಜದ ಏರು ಪೇರುಗಳು ಇಂದು ಬೇರೆಯಾಗಿದ್ದರೂ, ಕೈಲಾಸಂ ಹಾಕಿ ಕೊಟ್ಟ ಹಾದಿ ಇನ್ನೂ ಹೆದ್ದಾರಿಯೇ ಆಗಿದೆ. ನಂಕ್ಲಬ್ಬು-ನಂಮನೆ ಸಾತು ಪಾಕು-ನಂ ಪೋಲಿ ಕಿಟ್ಟಿ-ನಂ ಕಂಪ್ನಿ-ನಂ ಬಹಿಷ್ಕಾರ, ನಂ ವರದಕ್ಷಿಣೆ-ಹೀಗೆ ನಂ ನಂ ನಂ ನಮ್ಮ ನಾಟಕವಾಡಿ ಥಳುಕಿಸಿ ನಗಿಸಿದ ನಾಟಕಕಾರ ಕೈಲಾಸಂ ತನ್ನ ತನವನ್ನೇ ತನಗಾದಷ್ಟು ಕಳೆದುಕೊಳ್ಳುತ್ತಿದ್ದ

ನಾಟಕಕಾರ ಕೈಲಾಸಂ ಹೀಗೆ ಕೊಂಕುದೃಷ್ಟಿಯಿಂದ ನೋಡಿ ನಾಟಕ ಬರೆದು ಆಡಿ ತೋರಿಸಿದ. ಆದರೆ ಬಾಳ ನಾಟಕವನ್ನು ಆಡುವಾಗ ಏನು ಮಾಡಿದ. ಆತನ ವ್ಯಕ್ತಿತ್ವವೇನು?

ಸ್ವಲ್ಪಕಾಲ ಕೈಲಾಸಂ ನಮ್ಮ ಮನೆಯಲ್ಲಿದ್ದರು. ಬೆಳಿಗ್ಗೆ ಎದ್ದು ಕೆಲಸಕ್ಕೆ ನಾನು ಹೊರಡುವಾಗ ಅವರಿನ್ನೂ ಮಲಗಿರುತ್ತಿದ್ದರು. ಕೆಲಸ ಮುಗಿಸಿಕೊಂಡು ನಾನು ಹಿಂತಿರುಗುವ ವೇಳೆಗೆ ಅವರು ಶಾಲೆಗೆ ಹೋಗುವ ಹುಡುಗರ ಜತೆಯಲ್ಲಿ ಊಟ ಮಾಡಿ ಮುಗಿಸಿ ತಿರುಗಿ ಮಲಗಿರುತ್ತಿದ್ದರು. ಮಧ್ಯಾಹ್ನ ೩-೪ ಗಂಟೆಗೆ ನಾನು ಹೊರ ಹೊರಟಾಗ ಇನ್ನೂ ಗೊರಕೆಯಲ್ಲೇ ಇರುತ್ತಿದ್ದರು. ಹೀಗಾಗಿ ಸಂಜೆಯಲ್ಲೇ ಅವರು ಮಾತುಕಥೆಗೆ ನನಗೆ ಸಿಗುತ್ತಿದ್ದುದು. ಒಂದು ರೀತಿಯಾಗಿ ನಾನೂ ನಿಶಾಚರ ಹನ್ನೆರಡು ಗಂಟೆಗೆಲ್ಲಾ ಮಲಗಿಬಿಡುತ್ತಿದ್ದೆ. ಬೇಗ ಏಳಬೇಕಲ್ಲಾ ಅಂತ.

ಒಂದು ಮಧ್ಯಾಹ್ನ ಮನೆಗೆ ಹಿಂತಿರುಗಿದಾಗ ೨ ಗಂಟೆಯಾಗಿತ್ತು. ಕೈಲಾಸಂ ಇನ್ನೂ ಊಟ ಮಾಡಿಲ್ಲ ಎಂದ ಮನೆಯಾಕೆ ಹೇಳಿದಳು. ಕೊಠಡಿಯಲ್ಲಿ ಕೂತಿದ್ದರು ಕೈಲಾಸಂ. "ಯಾಕೆ ಸಾರ್ ಮೈ ಚೆನ್ನಾಗಿಲ್ವೇ? ಇನ್ನು ಊಟ ಮಾಡಿಲ್ವಂತೆ. ನನ್ಹತ್ತೀಗೆ ಏಳಿ" ಎಂದೆ. "ಇಲ್ಲಕಣೋ ನೀವಿಬ್ಬರೂ ಊಟಮಾಡಿ, ಆಮೇಲೆ ಹಸಿವಾದರೆ ನಾನು ಮಾಡ್ತೀನಿ" ಎಂದರು. "ಏನ್ಸಾರ್ ಇದು, ಹಳೇ ಕಾಲದಲ್ಲಿ ಅರಸರು ಮೊದಲು ಯಾರಿಗಾದರೂ ಅಡಿಗೇನ ಬಡಿಸಿ, ಅವರದನ್ನು ತಿಂದು ಸಾಯದೆ ಇದ್ದರೆ ನಂತರ ಊಟ ಮಾಡ್ತಾ ಇದ್ದರಂತೆ. ಈಗ ನೀವೂ ಹಾಗೇ ಮಾಡ್ತಿಧೀರಾ" ಎಂದು ವ್ಯಂಗ್ಯವಾಡಿದೆ. ಆತ ಯಾಕೆ ಹೀಗೆ ಮಾಡ್ತಿದಾನೆ ಎಂಬುದರ ಊಹೆಯೇ ಇರಲಿಲ್ಲ. "ಗೊತ್ತೋ, ನಿನ್ನ ಕುಚೋದ್ಯ! ಹೇಳಿದ ಹಾಗೆ ಮಾಡ್ರೋ" ಎಂದು ಹೇಳಿದರು. ನಾವಿಬ್ಬರೂ ಊಟ ಮಾಡಿದೆವು. ಆಮೇಲೆ ಅವರೂ ಊಟ ಮಾಡಿದರು. ಮಲಗುಕ್ಕೆ ಮುಂಚೆ "ಇವತ್ತು ಅಮ್ಮನ ತಿಥಿ ಕಣೋ, ಬ್ರಾಹ್ಮಣ ಮುತ್ತೈದೆ ನೀವು ಊಟ ಮಾಡಿದ ಮೇಲೆ ಮಾಡೋಣ ಅಂತ ಅನ್ನಿಸ್ತು" ಎಂದು ಮುಸುಕೆಳೆದುಕೊಂಡರು.

ಪೋಲಿಕಿಟ್ಟಿ ಮಗುವಿನ ಮನೆಗೆ ಮೊದಲ ಸಾರಿ ಹೋದಾಗ, ಕಿಟ್ಟಿಯ ತಾಯ ಮಾತನ್ನು ಮಗು ಆಡಿದಾಗ, ಕಿಟ್ಟಿ ಧಟ್ಟನೆದ್ದು ಗೋಡೆ ಹತ್ತಿರ ಹೋಗಿ ಮುಖವನ್ನು ಗೋಡೆ ಕಡೆಗೆ ತಿರುಗಿಸಿ ಪಟವೊಂದನ್ನು ನೀರಸವಾಗಿ ಗಮನಿಸುತ್ತಾನೆ. ಆಗ ಮಗೂ ತಾಯಿ ಏಕೆ ಎಂದು ಕನಿಕರದ ಒಲವಿನಿಂದ ಕೇಳಿದಾಗ ಕಿಟ್ಟಿ ಒಣಗಿದ ಸ್ವರದಿಂದ 'ಏನೂ ಇಲ್ಲಮ್ಮಾ, ನಂತಾಯಿ ಜ್ಞಾಪಕ ಬಂದು....'ಎನ್ನುತ್ತಾನೆ.

ಮುಕ್ಕಾಲು ಮುಸಲ್ಮಾನಿ ಭಾಷೇನ ಕ್ಯಾಕರಿಸ್ತಾ ಮಾತಾಡುವ, ಮುಸುಕಿದರೆ ಲಾಲ್ಮಟ್ಟಿ ಹಚ್ಚಿಕೊಂಡು ಕುಸ್ತೀಗಿಳಿಯುವ ಪೋಲಿಕಿಟ್ಟೀಗೆ ಲಾಲಿ ಹಾಡುವ ಹೆಂಗರುಳು.ಹೇಗಿತ್ತೋ ಹಾಗೆ ಕೈಲಾಸಂ ಕೂಡ ಹೆಂಗರಳು ತುಂಬಿದ್ದ ಮುದ್ದೇನೇ.

ಕಾರಣಾಂತರದಿಂದ ಅಂದರೆ ಹಣದ ಗೋಳಿನಿಂದ ಆದ ಅವಮಾನದಿಂದ, ವೈದ್ಯ ವಿದ್ಯಾಭ್ಯಾಸವನ್ನು ಮೂರನೇ ವರ್ಷದಲ್ಲಿ ತುಂಡು ಹಾಕಿ, ಬೆಂಗಳೂರಿನಲ್ಲಿ ಆಗ ತಯಾರಾಗುತ್ತಿದ್ದ "ವಸಂತಸೇನಾ" ಸಿನಿಮಾಕ್ಕೆ ಇಬ್ಬರು ಸ್ನೇಹಿತರೊಂದಿಗೆ ಸೇರಿಕೊಂಡೆ. ಒಂದೇ ಮಧ್ಯಾಹ್ನ ನಾನು ಅಲ್ಲಿದ್ದಿದ್ದು. ೨ ಗಂಟೆಗೆ ಹಾಜರಾಗಿದ್ದೆ. ೩ ಗಂಟೆಗೆ ಷಕಾರನ ಪಾತ್ರ ವಹಿಸಲು ಒಪ್ಪಿದ್ದ ಕೈಲಾಸಂ ಬಂದರು. ನನ್ನ ನ್ನೋಡಿದರು ಇಲ್ಲಿಗೆ ಯಾಕೋ ಬಂದೆ ಅಂದರು. ಎಲ್ಲವನ್ನೂ ಹೇಳಿದೆ. ಡೈರೆಕ್ಟರಿಗೆ ಹೇಳಿ ನನ್ನನ್ನು ಅಲ್ಲಿಂದ ಒದ್ದು ಕಳಿಸಿದರು. ಆ ಸಂಜೆ ಕೈಲಾಸಂ "ನಾಚಿಕೆ ಆಗುಲ್ವೇನೋ ಹಿಡಿದ ಕೆಲಸಾನ ಮಾಡುಕ್ಕಾಗದೆ ಈ ಎಂಜಲು ಸಂಬಳಕ್ಕೆ ಬರ್‍ತೀಯಲ್ಲೋ, ಹೆಣ್ಣಾಕ್ಸ್" ಅಂತೆಲ್ಲಾ ಅವರ ನಿರರ್ಗಳ ಸಂಸ್ಕೃತ ಭಾಷೆಯಲ್ಲಿ ಕಂಡಾಪಟ್ಟೆ ಬೈದರು. ಧೈರ್ಯದ ಒಂದು ಮುಖವಾಡವನ್ನು ದರ್ಶನ ಮಾಡಿಸಿದರು.

ಮೂವತ್ತೆರಡು ವರ್ಷಗಳಾದ ಮೇಲೆ, "ನೀನೇನ್ ಬೇಕಾದ್ರೂ ಬೈಕೋ ನಸ್ರಾಜ ನನ್ನ ಭಾಗಕ್ ದೇವ್ರ ಹಾಗ್ ಬಂದು ಕಾಪಾಡಿದ್ಯಲ್ಲ" ಎಂದು ಬೈಸಿಕಲ್ ಅಪಘಾತದಿಂದ ಮಗುವನ್ನು ಕಿಟ್ಟಿ ತಪ್ಪಿಸಿದಾಗ, ಮಗುವಿನ ತಾಯಿ ಹೇಳಿದ್ದನ್ನೇ ನಾನೂ ಹೇಳುತ್ತೇನೆ.

* * * *

ಕೈಲಾಸಂರವರನ್ನು ಬರಹೇಳಿದ್ದೆನಾದ್ದರಿಂದ, ಭಾನುವಾರ ಸಂಜೆ ಕ್ಲಬ್ಬಿಗೆ ಹೋಗಿದ್ದೆ. "ಇದೇನೋ ಭಾನುವಾರ, ಎಂದೂ ಇಲ್ಲದ್ದು ಇವತ್ತು ಬಂದಿದೀ, ಯಾಕೆ ಕೈಲಾಸಂ ಸಿಗಲಿಲ್ವೇನೋ" ಎಂದು ನನ್ನ ಹಿರಿಯ ಮಾಸ್ತರು ಕುಹಕ ಮಾಡುತ್ತ ಕೇಳಿದರು. ಕೈಲಾಸಂ ಜತೆ ಓಡಿಯಾಡುವುದನ್ನು ಕಾಲೇಜಿನಲ್ಲಿದ್ದಾಗಿನಿಂದ ಅವರು ವಿರೋಧಿಸಿದ್ದರು. ಕೈಲಾಸಂರವರ ವಿಷಯದಲ್ಲಿ ಅವರ ಅಭಿಪ್ರಾಯ ಅಷ್ಟೇನೂ ಗೌರವ ತುಂಬಿದ್ದಲ್ಲ. ನನ್ನೆದುರಿಗೆ ಅದನ್ನು ಮುಚ್ಚಿಡಲೂ ಇಲ್ಲ ಅದೇ ಪಲ್ಲವೀನ ತಿರುಗಿ ಶುರು ಮಾಡಿದರು.

ಆ ವೇಳೆಗೆ ಕೈಲಾಸಂ ಬಂದರು. ಮಾಸ್ತರು ಅವರನ್ನು ಎಷ್ಟು ಆದರದಿಂದ ಎದುರ್ಗೊಂಡರು ಅಂತೀರಿ? ಆ ಸಂಜೆ ಅವರೇ ಅತಿಥೇಯರಾದರು. ಎಷ್ಟೆಲ್ಲಾ ಹೊಗಳಿಕೆ ಮಾತಾಡಿದರು ಅಂತ! ನನಗೆ ಅರ್ಥವೇ ಆಗಲಿಲ್ಲ.

ಹಿಂತಿರುಗುವಾಗ ತಡೆಯಲಾರದೆ "ಮಾಸ್ತರು ಸಮಾಜದಲ್ಲಿ ಗೌರವಸ್ಥರು. ನೀವು ಬರುಕ್ಕೆ ಮುಂಚೆ ಹೀಗೆಲ್ಲಾ ಅನ್ನುತ್ತಿದ್ದರು. ನಿಮ್ಮನ್ನು ಕಂಡಾಗ ಮೇಲೆ ಬಿದ್ದು ಮುತ್ತು ಕೊಡೋ ಹಾಗೆ ಆಡಿದರಲ್ಲ, ಈ ಸುಳ್ಳು ನಟನೆಯ ಮರ್ಮವೇ ತಿಳಿಯಲಿಲ್ಲ" ಎಂದು ಕೇಳಿಯೇಬಿಟ್ಟೆ.

"ಇದರ ಮರ್ಮ ಏನು ಬಂತೋ! ಅವರೂ ನಾನೂ ಲಂಡನ್ನಿನಲ್ಲಿ ಒಟ್ಟಿಗೆ ಓದುತ್ತಿದ್ದೆವು. ಅವರಲ್ಲಿ ನಪಾಸಾದ್ದು, ಪೇಚಿಗೆ ಸಿಕ್ಕಿದ್ದು ಎಲ್ಲ ನನಗೆ ಗೊತ್ತು ಅಂತ ಅವರಿಗೂ ಗೊತ್ತು. ಇಲ್ಲಿ ಯಾರಿಗೆ ಗೊತ್ತಿಲ್ಲ, ನಾನು ಎಲ್ಲಿ ಹೇಳಿಬಿಡ್ತೀನೇನೊ ಎಂಬ ಹೆದರಿಕೆ ೨೫ ವರ್ಷಗಳಿಂದ, ಅವರಿಗೆ. ಹಿಂದೆ ವಿಷದ ಮಾತಾಡ್ತಾರೆ ಅನ್ನೋದು ನಂಗೂ ಗೊತ್ತೊ! ಹೆದರೋ ಹೆಣ್ಣಾಕ್ಸ್‌ಗಳ ಹಣೇಬರಹಾನೆ ಹೀಗೆ ಕಣೊ! ತಪ್ಪು ಮಾಡಿದರೆ ಒಪ್ಕೊಂಡು ತಿದ್ದಿಕೊಳ್ಳಬೇಕು. ತಪ್ಪು ಮುಚ್ಚಿದರೆ, ದೊಡ್ಡ ತಪ್ಪು ಬೆಳೆಯುತ್ತೊ, ಮುಚ್ಚುಕ್ಕೆ ಆಗ ಇನ್ನೂ ಕಷ್ಟ" ಎಂದು ಹೇಳಿದರು. ಭಯದ ಒಂದು ಮುಖವಾಡದ ದರ್ಶನವನ್ನು ಮಾಡಿಸಿದರು.

ರಸ್ತೆ ಹಾಕಿಕೊಡುವವರ ಮೈ ಧೂಳಿನಿಂದ ತುಂಬಿರುವುದು ಸಹಜ. ಆದರೆ ಆ ರಸ್ತೆಯಲ್ಲಿ ನಡೆಯುವರು, ಹಾದಿ ಹಾಕಿಕೊಟ್ಟವರ ಕೆಚ್ಚಿನ ಅರಿವನ್ನು ಗುರ್ತಿಸಿ, ಮುಂದೆ ನಡೆದರೆ ಶ್ರೇಯಸ್ಕರ!

ಇದು ಕೇಳಿದ್ದೀರಾ ?

ವಿರಾಟರಾಯನಿಗೆ ಒಂದೇ ಆಸೆ. ತನ್ನ ಮಗ ಉತ್ತರಕುಮಾರ ಎಂದಾದರೂ ರಣಧೀರನಾಗಬೇಕು. ತನ್ನ ಹೆಂಡತಿ ತಮ್ಮ, ಕೀಚಕನಿಂದ, ಸೈನ್ಯದ ಅಧಿಕಾರ ವನ್ನು ಕಸಿದುಕೊಳ್ಳಬೇಕು, ಅಂತ ದೊಡ್ಡ ಬಯಕೆ.

ಎಲಡಿಕೆ ಮಡಿಸಿಕೊಡುತ್ತಾ, ಹೆಂಡತಿ ಸುದೇಷ್ಣೆಗೆ ಹೇಳಿದ. ಉತ್ತರ ಕುಮಾರನನ್ನು ಸಮರ ವಿದ್ಯೆಯಲ್ಲಿ ಪಾರಂಗತನನ್ನಾಗಿ ಮಾಡಬೇಕು ಅಂತ. ಆಕೇನೂ ಒಪ್ಪಿದಳು. ಕೀಚಕನಿಗೆ ತಿಳಿಯದ ಹಾಗೆ, ವಿರಾಟನಗರದ ಸೈನ್ಯದಿಂದ ವಿಶ್ರಾಂತಿ ವೇತನ ಪಡೆದು " ರಿಟ್ಯಾರ್ " ಆಗಿದ್ದ ಬೆಳ್ಳಿಯಪ್ಪನ್ನ ಕರೆಸಿ, " ನೋಡಿ, ನಮ್ಮ ಯುವರಾಜರಿಗೆ, ಧನುರ್ವಿದ್ಯೆ, ಕುಸ್ತಿ, ಕತ್ತಿವರಸೆ, ಗದೆಗುದ್ದಾಟ, ಎಲ್ಲವನ್ನೂ ಕಲಿಸಬೇಕು. ಇಡೀ ದೇಶದಲ್ಲಿ ಯುವರಾಜರನ್ನ ಮೀರಿಸೋ ಗಂಡು ಇರಬಾರದು. ಹೀಗೆ ಕಲಿಸಿದರೆ ನಿಮಗೆ ಕೇಳಿದ್ದು ಕೊಡೋದಲ್ಲದೆ ವಿರಾಟದೇಶದ ಆಬ್ಕಾರೀ ಕಂಟ್ರಾಕ್ಟನ್ನೂ ನಿಮಗೇ ಕೊಡಿಸ್ತೀನಿ" ಎಂದು ವಿರಾಟರಾಜ ಹೇಳಿದ. ಬೆಳ್ಳಿಯಪ್ಪ ಒಪ್ಪಿದ.

ಮಾರನೆ ದಿನದಿಂದ ಬೆಳ್ಳಿಯಪ್ಪ ಅರಮನೆ ಹಿತ್ತಿಲಕಡೆ ಏಳುಗಂಟೆಗೆ ಸಿದ್ಧ ವಾಗುತ್ತಿದ್ದ. ಉತ್ತರಕುಮಾರರನ್ನು ಎಬ್ಬಿಸಿ, ಅವರಿಗೆ ಸೈನ್ಯದ ವೇಷಭೂಷಣ ಗಳನ್ನು ಅರಮನೆ ಅವ್ವೆಯರಿಂದ ತೊಡಿಸಿ, ಶಿಕ್ಷಣಾಲಯಕ್ಕೆ ಹೋಗೋಹೊತ್ತಿಗೆ ಹತ್ತುಗಂಟೆಯಾಗುತ್ತಿತ್ತು.

ಬಿಲ್ಲಿನ ಪ್ರಯೋಗವನ್ನು ಮೊದಲು ಕಲಿಸಲು ಪ್ರಾರಂಭ ಮಾಡಿದ. ಬಿಲ್ಲಿಗೆ ಹೆದೆಯೇರಿಸುವುದು, ಹೇಗೆ ಹಿಡಿದುಕೊಳ್ಳುವುದು, ಬಾಣವನ್ನು ಬತ್ತಳಿಕೆಯಿಂದ ಹೇಗೆ ಹೂಡುವುದು ಠೇಂಕಾರ ಮಾಡಿಸುವ ವಿಧಾನ, ಗುರಿನೋಡುವ ರೀತಿ, ಪ್ರಯೋ ಗಿಸುವ ಚಾಲೂಕು ಎಲ್ಲವನ್ನೂ ಮೂರುತಿಂಗಳು ಹೇಳಿಕೊಡಲು ಅಸ್ಥಾವಸ್ಥೆ ಪಟ್ಟ.

ಕಡೆಗೆ ಪರೀಕ್ಷೆ ದಿನ ಬಂದಿತು. ಬೆಳ್ಳಿಯಪ್ಪ ಹೇಳಿದ. ಇವತ್ತು ನಾನೇನೂ ಹೇಳಿಕೊಡೋದಿಲ್ಲ. ಗುರಿ ಎಲ್ಲಿ ಎಂಬುದನ್ನು ತೋರಿಸ್ತೀನಿ ಅದಕ್ಕೆ ಬಾಣ ಹೊಡಿ ಯಿರಿ ಎಂದ. " ಇಷ್ಟು ದಿನ ಆದ ಮೇಲೆ ಅಷ್ಟೂ ಬರುಲ್ವೆ" ಎಂದ ಯುವರಾಜ.

" ಹೊಡಿ " ಎಂದ ಬೆಳ್ಳಿಯಪ್ಪ.

ಅರ್ಧ ತಾಸಾಯಿತು, ಬಿಲ್ಲಿಗೆ ಹುರಿ ಕಟ್ಟುವಾಗ ಉತ್ತರೀಯವನ್ನು ಇನ್ನೂ ಬಿಡಿಸುತ್ತಿದ್ದ, ಉತ್ತರಕುಮಾರ.

" ಮಗನೇ ಶತ್ರು ಎದುರಿಗೆ ಬಂದರೆ ಬಿಲ್ಲನ್ನೇ ಅವನ ತಲೆಮೇಲೆ ಎಸೆದುಬಿಡು ಹೆದೆಯೇರಿಸಿ ಬಾಣ ಹೂಡುಕ್ಕೆ ಹೋಗಬೇಡ" ಅಂತ ಹೇಳಿ ಬೆಳ್ಳಿಯಪ್ಪ ರಾಜೀನಾಮೆ ಕೊಟ್ಟುಬಿಟ್ಟನಂತೆ.

* * * *

ದೀಪಾವಳಿಗೆ ಹೋಗಿದ್ದ ಗಾಂಧರ್ವ, ಹೆಂಡತಿಯನ್ನು ಕರೆದುಕೊಂಡು ಬಂದಿದ್ದ. "ನೋಡೇ! ಸ್ವರ್ಗಕ್ಕೆ ಬಂದವರೆಲ್ಲ, ಆದಷ್ಟುಬೇಗ ಸುರಪತಿಯ ಮನೆಗೆ ಹೋಗಿ ವಂದನೆಗಳನ್ನು ಹೇಳಿ ಬರಬೇಕು ಇದೊಂದು ಕಟ್ಟಳೆ" ಎಂದು ಹೇಳಿದ. "ಅಲ್ಲಿಗೆ ಹೇಗೆ ಹೋಗಲಿ, ಅಂದ್ರೆ! ಬಡವರ ಮನೆ ಹೆಣ್ಣು ನಾನು, ರಾಣೀನ ಕಂಡರೆ ಬೆಚ್ಚಿಬೀಳ್ತೀನಿ. ಸ್ವಸ್ತಿ ವಂದನೇನ ಹೇಗಾರೂ ಮಾಡುಕ್ಕಾಗುತ್ತೆ? ನನ್ನಿಂದ ಆಗುಲ್ಲ ಅಂದ್ರೆ! ಎಂದು ನಡುಗುತ್ತಾ ಹೇಳುತ್ತ, ಗಂಡನನ್ನು ಅಪ್ಪಿಕೊಂಡಳು. "ಅಯ್ಯೋ! ಪೆಚ್ಚಿ! ಇದಕ್ಕೆ ಏಕೆ ಇಷ್ಟು ಹೆದರಿಕೆ? ನೇರವಾಗಿ ಅರಮನೆಗೆ ಹೋಗು. ಬಾಗಿಲು ತಟ್ಟು ಯಾರಾದರೂ ಅವ್ವೆಯವರು ಬಂದು ತೆಗೆಯುತ್ತಾರೆ. ರಾಣಿ ಶಚೀದೇವಿಗೆ ವಂದಿಸಬೇಕು ಎನ್ನು ನಿನ್ನ ಒಳಕ್ಕೆ ಕರಕೊಂಡು ಹೋಗ್ತಾಳೆ ಆಮೇಲೆ ಅವಳೇ ಎಲ್ಲಾ ಮಾಡಿಸ್ತಾಳೆ" ಎಂದು ಗಂಧರ್ವ ಕಿವೀಗೆ ತುಟಿ ತಾಕಿಸಿ ಹೇಳಿ ಧೈರ್ಯಕೊಟ್ಟ.

ಕೆಲವು ದಿನಗಳಾದ ಮೇಲೆ ಒಂದು ಬೆಳಿಗ್ಗೆ ಗಂಧರ್ವನ ಹೆಂಡತಿ ಎದ್ದಾಗ, ಗಂಧರ್ವ ಇರಲಿಲ್ಲ. ಅಡಿಗೆ ಮನೆ ಒಲೆ ಹತ್ತಿರ, ಕಾಫಿ ಕೆಟಲ್ ಹತ್ತಿರ ಕಾಗದ ಒಂದಿತ್ತು. "ಜರೂರು ಬಾ ಅಂತ ನೋದರನಾವ ತಂತಿ ಕಳಿಸಿದ್ದ. ಬೆಳಗಿನ ಝಾಮು ೪ ಗಂಟೆಗೆ ಬಂತು. ನಿನಗೆ ನಿದ್ರೆ ತುಂಬಾ ಬಂದಿತ್ತು. ಯಾಕೆ ಎಬ್ಬಿಸೋದು ಅಂತ ಕಾಫೀನ ನಾನೇ ಮಾಡಿ, ಅಡಿಗೆಯಮನೇಲಿ ಬಿಸಿ ಸಂದೂಕದಲ್ಲಿ ಇಟ್ಟು, ಕಾಗದ ಬರೆದು ಹೋಗ್ತಿಧೀನಿ, ಸಂಜೇಗೆ ಮುಂಚೆ ಬಂದುಬಿಡ್ತೀನಿ" ಎಂದು ಬರೆದಿತ್ತು.

ಕಾಫಿ ಕುಡಿದು, ಈಗೇನು ಮಾಡಲಿ ಎಂದು ಗಂಧರ್ವನ ಹೆಂಡತಿ ಯೋಚನೆ ಮಾಡಿದಳು. ಹೇಗೂ ಬೇಜಾರು, ಇವತ್ತೇ ಅರಮನೆ ಕಟ್ಟಳೆ ಮುಗಿಸೋಣ ಅಂತ ಶೃಂಗಾರ ಮಾಡಿಕೊಂಡು ಶಚೀದೇವಿಯ ಬಳಿಗೆ ಹೊರಟಳು. ಗಂಡ ಹೇಳಿದ್ದನೆಲ್ಲಾ ಜ್ಞಾಪಿಸಿಕೊಂಡು ಧೈರ್ಯ ತೆಗೆದುಕೊಂಡಳು. ಅರಮನೆ ಸಿಕ್ಕಿತು.

ಅರಮನೆಯ ಬಾಗಿಲನ್ನು ತಟ್ಟಿದಳು. ಬಾಗಿಲು ತೆರೆಯಿತು. ಆದರೆ! ಅವ್ವೆ ಯಾರೂ ಬಾಗಿಲ ತೆರೆದಿರಲಿಲ್ಲ. ಸಾಕ್ಷಾತ್ ಇಂದ್ರನೇ ಬಾಗಿಲು ತೆಗೆದಿದ್ದ. ಕಟ್ಟಳೆ ಗೊತ್ತಿತ್ತು ಇಂದ್ರನಿಗೆ. ಅದಕ್ಕೇ ಕೇಳಿದ. "ಹೆಸರೇನು? ಏನು ಬಂದಿದ್ದು" ಎಂದು.

ಗಂಧರ್ವನ ಹೆಂಡತೀಗೆ ಗಾಭರಿಯಾಗಿತ್ತು. ಅವಳ ಯೋಜನೆಯೆಲ್ಲ ತಪ್ಪಿತ್ತು. ಇಂದ್ರನ್ನ ಕಂಡು ಬೆದರಿದ್ದಳು.

ಹೆಸರೇ! ಹೆಸರಿಲ್ಲ. ಬಸುರಾಗಿದಾರೆಯೇ ಶಚೀದೇವಿ ಅಂತ ಕೇಳುಕ್ಕೆ ಬಂದೆ ಎಂದು ತೊದಲಿದಳು ಪಾಪ!

ಚುನಾವಣೆಯಿಂದ ದೂರದಲ್ಲಿ ಬದುಕಿದೋರು

ಮೊನ್ನೆ ಹೆಂಜಾನಪ್ಪ ಬಂದ ದವಾಖಾನೇಗೆ. ಅರವತ್ತು ರೂಪಾಯಿ ಕೊಟ್ಟ.

" ಏನೂ ತಿಳಕೋಬೇಡಿ, ಡಾಕ್ಟರೇ! ತುಂಬಾ ಕೆಲಸ ಇತ್ತು, ಮೊದಲೇ ಬರುಕ್ಕಾಗ್ನಿಲ್ಲ. ಬಾಕಿ ಕೊಡಲಿಲ್ಲ ಅಂತ ಬೇಜಾರು ಪಡಬೇಡಿ" ಅಂದ.

ಐವತ್ತೆಂಟು ರೂಪಾಯಾಗಿತ್ತು ಅವನ ಬಾಕಿ. ಎಂಟೂ ವರ್ಷದಿಂದ ಬೆಳೆದು ಬಂದಿತ್ತು. ಇವತ್ತು ಯಾಕೆ ಈ ಧರ್ಮಬುದ್ಧಿ ಬಂತು ಅಂತಿದ್ದೆ. ತಲೆ ಕೆರಕೊಂಡೆ.

" ಡಾಕ್ಟರೇ! ಈ ಸಾರಿ ಚುನಾವಣೆಗೆ ನಿಂತಿವ್ನಿ. ಹೆಂಗಾರ ಮಾಡಿ, ನೀವು ಗಡ್ಡೇಗೆ ಹಾಕ್ಬೇಕು. ದವಾಖಾನೇಗೆ ಬಂದೋರಿಗೆ ನೀವೊಂದು ಮಾತು ಹೇಳಿದ್ರೆ ಸಾಕು. ನಿಮ್ಮ ಮಾತಿಗೆ ಯಾರಾನ ಎದುರಾಗ್ತಾರಾ" ಎಂದ ಹೆಂಜಾನಪ್ಪ. ಬಾಕಿ ಸಲ್ಲಿಸಿದ ಮರ್ಮ ಅರ್ಥವಾಯಿತು"

ಅಂತ ಡಾಕ್ಟರೊಬ್ಬರು ಬರೆದಿದ್ದಾರೆ, ದೂರದಿಂದ ಬದುಕಿದೋರು.

* * * *

ಬಂಡೆ ಆಂಜನೇಯನ ಗುಡಿ ಪೂಜಾರಿಗಳು ಒಂದು ಕಾಗದ ಬರೆದಿದ್ದಾರೆ.

" ಬದುಕಿಹೋದ ನಮ್ಮ ಆಂಜನೇಯ! ಈ ಸಂಜೆ ಹಟ್ಟಿ ದಳ್ವಾಳಿ ರಂಗನ ಗೌಡ ಬಂದು, 'ಅಯ್ನೋರ, ತೊಕ್ಕೊಳ್ಳಿ ಈ ನೂರ, ನಾಳೇನೇ ತುಪ್ಪಾಳೇಹಣ್ಣಿ ಸೇವೆ ಮಾಡ್ಸಿ, ಬಾದಾಮಿ ಕೆಂಪುಕಲ್ಲಸಕ್ಕರೆ ಹಾಕ್ಸಿ, ಬಂದೋರಿಗೆಲ್ಲ ದೊನ್ನೆ ತುಂಬ ಪ್ರಸಾದ ಹಂಚಿ. ಹಂಗೇ ಈ ಕಾಗದಾನೂ ಹಂಚಿ, ಈ ಸಾರಿ ಇಲೆಕ್ಷನ್‌ಗೆ ನಿಂತಿಧೀನಿ. ಅದರದೇ ಕಾಗದ. ನೀವು ಮನಸ್ಸು ಮಾಡಬೇಕು' ಅಂದ.

ಮೂರು ತಿಂಗಳ ಸಾಲಾನ ದಿನಸಿ ಅಂಗಡಿಯವನಿಗೆ ತೀರಿಸಿದೆ" ಅಂತ.

* * * *

ಬದುಕಿಹೋದೆ ನಾನು ಅಂತ ಗಿಡ್ಡಣ್ಣ ಬರೆದಿದ್ದಾನೆ.

" ಮೊನ್ನೆ ಹಜಾಮತ್ತಿಗೆ ಬೈರಣ್ಣನ ಶಿಲೂನ್‌ಗೆ ಹೋದೆ. ಸೊಂಟದಾಗ ಒಂದು ರೂಪಾಯಿ ಕಟ್ಟಿದ್ದೆ. ಮೂರು ತಿಂಗಳಾಗಿತ್ತು ಕಾಸು ಸಿಕ್ಕಿ, ತಲೆ ಬೆಳೆದಿತ್ತು, ನವೆ ಆಗ್ತಿತ್ತು.

ಏನೆಲ್ಲ ಆದರ ಮಾಡಿದ ಬೈರಣ್ಣ. ತಲೆಗೆ ಬೆಣ್ಣೆ ಹಚ್ಚಿ ಬಾಚಿ, ಆಮೇಲೆ ಕಟಾವ್ ಮಾಡಿದ. ಅತ್ತರ್ ಹಚ್ಚಿದ. ಹೋಗೋವಾಗ ಏನು ಕೊಡಬೇಕ್ಲಾ ಅಂದೆ. ನಿಮ್ಮ ಹತ್ರ ಇಸುಕೊಳ್ಳೋದಾ, ಅಂದ. ತಲೆ ಕೆರಕೊಂಡು ಆಮೇಲೆ ಸೇರಿಸಿದ " ಹೆಲೆಕ್ಷಂಗೆ ನಿಂತೀನಿ. ವೋಟು ಕೊಟ್ಟೇರಲ್ಲಾ" ಅಂದ. ರೂಪಾಯಿ ದೋಸೆ ತಿಂದೆ. ಬದುಕಿಹೋದೆ" ಅಂತ.

ಹಿತಾಕಾಂಕ್ಷಿಯಿಂದ

ಮಾನ್ಯ ಶ್ರೀ ಮೆನನ್‌ರವರೇ,

ಹೀಗಂದಾಗ ಕೃಷ್ಣಮೆನನ್ ಅಂತ ಹೇಳಬೇಕಾಗಿಲ್ಲವಲ್ಲ. ಮಾನ್ಯರಾಗಿರುವ ಮೆನನ್ ಅಂದರೆ, ಈಗ, ನೀವೇ ಅಲ್ಲವೇ? ಇನ್ನಾ್ಯರಿದಾರೆ ನಿಮ್ಮಂತೆ!

ತಾವು ಅಮೇರಿಕಾದ ಅಧ್ಯಕ್ಷರನ್ನು ಭೆಟ್ಟಿಯಾಗಿ ಬಂದಿರಿ ಎಂದು ಪತ್ರಿಕೆಗಳಲ್ಲಿ ಓದಿದೆ. ನನ್ನ ಹಾಗೇ ನೀವೂ ಅಂತ ಅನ್ನಸ್ತು. ಅದಕ್ಕೇ ಈ ಕಾಗದಾನ ಬರೀತಿದ್ದೀನಿ. ನೋಡಿ! ನಿಮ್ಮ ಹಾಗೇ ನಾನು ಬಡವ. ಬುದ್ಧಿಶಕ್ತಿಯಿಂದ, ಒಳ್ಳೇ ಮನಸ್ಸಿನಿಂದ, ನಮ್ಮನೇನ ಉದ್ಧಾರ ಮಾಡಬೇಕು ಅಂತ ನನಗೆ ಹೇಗೆ ಆಸೆ ಇದೆಯೋ ಹಾಗೇ ನಿಮಗೂನು. ನಿಮ್ಮ ಹಾಗೇ ನಾನು ಇವತ್ತು. ಸುಮ್ಮಾನದ ಮುದ್ದೆಯಾಗಿರುವ ನಮ್ಮ ಮಾವನ ಮನೆಗೆ ದೀಪಾವಳಿ ಭೇಟಿ ಕೊಟ್ಟು ಒಂಟಿಯಾಗಿ ಬರ್ತಿದೀನಿ. ನನ್ನ ಭಾವಮೈದ ಜರ್ಮನಿಗೆ ಓದುಕ್ಕೆ ಹೋದವನು ಹಿಂತಿರುಗಿ ಬಂದಿದ್ದ. 'ತಮ್ಮನ ಜತೆ ಎರಡು ದಿನ ಇದ್ದು ಬರ್ತೀನಿ' ಅಂತ ಇವಳಂದಳು. 'ಹ್ಞೂ' ಅಂತ ಅನ್ನದೇ ಇದ್ದಿದ್ದರೆ ನನ್ನ ಮಾನ ಉಳಿಯುತ್ತಿತ್ತಿಲ್ಲ. ಅದಕ್ಕೇ ಬಂದುಬಿಟ್ಟೆ, ಒಂಟಿಯಾಗಿ.

ಆದರೆ ನೋಡಿ, ಯೋಚಿಸಿ ನೋಡಿದೆ. ನನಗೂ ತಕ್ಕಮಟ್ಟಿಗೆ ಜಾಣತನ ಇದೆ. ಕುಶಾಗ್ರ ಬುದ್ಧಿಯಿದೆ. ಆದರೆ ಹುಡುಗತನದಲ್ಲಿ, ಬಡತನದ ಬೇಗೆ, ಅವರಿವರು ಮಾಡಿದ ಅವಮಾನ, ಎಲ್ಲಾ ನನ್ನನ್ನು ಕೊಂಡಿ ಹಾಕಿದೆ. ಕಣ್ಣಿಗೆ ಕಾಣದ ಹಾಗೆ ಕುಟುಕುತ್ತಿದೆ. ಅದಕ್ಕೇ ನೋಡಿ ಈಗ ಎಲ್ಲೇ ಆಗಲಿ ನಾನು ಮಾತನಾಡಿದರೆ "ಚುರುಕು ಮಾತಾಡ್ತಾನೆ ಜಾಣ, ಇವನನ್ನ ಒದ್ದುಬಿಡಬೇಕು" ಎಂದು ಎಲ್ಲರೂ ಬೈಯುತ್ತಿದಾರೆ. ಯೋಚನೆ ಮಾಡಿ ನೋಡಿದೆ, ಯಾಕೆ ಹೀಗೆ ಅಂತ. ಎಲ್ಲರೂ ಚೆನ್ನಾಗಿರಲಿ ಅಂತಲೇ ನನ್ನ ಬಯಕೆ. ಈಗ ತಿಳೀತು. "ನಾನು ಒಳ್ಳೇ ಮನಸ್ಸಿನಿಂದ ಮಾತನಾಡುವಾಗ, ಬಾಲ್ಯದಲ್ಲಿ ಕೊಂಡಿ ಹಾಕಿದ್ದ ಬೇಗೆ, ಅಪ್ಪಿಕೊಂಡಿದ್ದ ಅವಮಾನ, ಎಲ್ಲವೂ ಆಡಿದ ಮಾತಿಗೆ ಹರಿತವಾದ ಅಲುಗನ್ನು ಕೊಟ್ಟು, ಅಂದದ್ದೆಲ್ಲ ಅಂದೇ ಕತ್ತು ಕುಯ್ಯುತ್ತೆ" ಅಂತ.

ನೀವೂ ನನ್ನ ಹಾಗೇ ಅನ್ನಿಸಿತು. ಅಯ್ಯೋ ಪಾಪ! ಅಂತ ನನಗೆ ಅಳು ಬಂತು. ಅದಕ್ಕೇ ಈ ಕಾಗದ ಬರೀತಿದೀನಿ.

ನಮ್ಮ ಮಾವನ ಮನೆಗೆ ಹೋಗಿದ್ದಾಗ, ದೀಪಾವಳೀಗೆ ಅಂತ, ಪಕ್ಕದ ಮನೆಯಲ್ಲಿ ಆ ಮನೆಯ ಮಕ್ಕಳು ಮತಾಪು ಹತ್ತಿಸಿದರು. ಹುಡುಗ ಹಿಡಿದುಕೊಂಡಿದ್ದ ಮತಾಪನ್ನ. ಉರೀತಾ ಉರೀತಾ ಅದು ಅವನ ಬೆರಳ ಹತ್ತಿರಕ್ಕೇ ಬಂತು. ಹೆದರಿದ ಆ ಹುಡುಗ, ಆ ಮತಾಪನ್ನ ಎಸೆದ. ನಮ್ಮನೇಲಿ ಬಿತ್ತು. ಆಗ ನಮ್ಮ ಮಾವನವರು ವರಾಂಡದಲ್ಲಿ ಕೂತಿದ್ದರು. ಅವರ ಮುಂದೇ ಬಿತ್ತು.

“ಕಳ್ಳ ಸೂ.... ಮಕ್ಕಳು. ಜ್ಞಾನ ಇಲ್ಲ. ಬುದ್ಧಿ ಇಲ್ಲ ಅಂತ ಸಿಕ್ಕಾಪಟ್ಟೆ ಬೈದರು. ರೇಗಿದರು.

ಅಲ್ಲೇ ಇದ್ದೆ ನಾನು. “ಮಾವಯ್ಯ! ಹುಡುಗರಾಟ. ಹೆದರಿದ ಹುಡುಗರಾಟ ಇದಕ್ಕೆ ಯಾಕೆ ರೇಗುತ್ತೀರಿ. ನೀವೂ ಕೂಡ ಮೂವತ್ತು ರೂಪಾಯಿಗೆ ಮತಾಪು ಕೊಂಡು ತಂದೆ ಅಂತ ಮಧ್ಯಾಹ್ನ ಚಿರೋಟಿ ತಿನ್ನುತ್ತಿರುವಾಗ ಹೇಳಲಿಲ್ಲವೇ?” ಎಂದು ಸಮಾಧಾನ ಹೇಳಿದೆ.

“ನಾನು ಮತಾಪು ಕೊಂಡರೆ, ನನ್ನ ಮಕ್ಕಳು ಹಚ್ಚಿದರೆ, ಪಕ್ಕದ ಮನೆಗೆ ಎಸೆಯುಲ್ಲ” ಅಂದರು. “ಶುದ್ಧ ಹುಡುಗು ಬುದ್ಧಿ ನಿನ್ನದು, ನಿನಗೆ ಯಾಕಾರ ಹೆಣ್ಣು ಕೊಟ್ಟೆನೋ” ಎಂದು ಕೊರಗಿದರು.

ನಾನು ಹೇಳಿದ್ದು ನಿಜವಾದ್ದನ್ನೇ, ಆದರೆ ಹೇಳಿದ ರೀತೀಲಿ, ನನ್ನ ಬಾಲ್ಯದ ಬೇಗೆಯು ಕೊಂಡಿ ಹಾಕಿಕೊಂಡಿತ್ತು. ಈಗರ್ಥವಾಯಿತು.

ನನ್ನ ಹಾಗೇ ನೀವೂ ಕೂಡ. ದೀಪಾವಳಿ ಎಲ್ಲೆಲ್ಲೂ ಸಡಗರದಿಂದ ಆಚರಿಸಲ್ಪಡಲಿ ಎಂಬ ಆಸೆ. ಆದರೆ ನಮ್ಮ ಬಾಳಿನಲ್ಲಿ ದೀಪಾವಳಿ ದಿನ ಅಂಧಕಾರ ತುಂಬಿದೆ. ಅದನ್ನು ಮರೆತುಬಿಡೋಣ ಅಂತ ಈ ಕೊಂಕುಮಾತು ಆಡ್ತಾ ಇದೀವಿ. ನಾವಾಡೋದು ನಿಜ. ಆದರೆ ಆಡೋ ರೀತಿ, ಆಡುವ ಕಾಲ ಮಾತ್ರ, ಶಿವಪೂಜೇ ಮಾಡುವ ಗುಡಿಯಲ್ಲಿ ಕರಡಿ ನುಗ್ಗಿ ನುಡಿದ ಹಾಗೇನೇ.

ಆದಕ್ಕೇ ನಾನು ಈಗ, ನಮ್ಮನೆ, ಎಲ್ಲರ ಮನೆ ಅನ್ನೋದನ್ನ ಮರೆತು, ಬಯಲು, ದೇವರು ಅಂತ ಅನ್ನುತ್ತಿದ್ದೇನೆ.

ನೀವೂ ಕೂಡ ಹೆಸರು ಬದಲಾಯಿಸಿಕೊಳ್ಳಿ. Men on ಅನ್ನಬೇಡಿ, ಇನ್ನು ಮೇಲೆ God on ಅನ್ನಿ. ಇಂಗ್ಲೀಷಿನ ತಿರುಳು ತಿಳಿದ ನಿಮಗೆ ಇದು “God

dam" ಅಂತ ಕೇಳಿಸಬಹುದು. ಅದೂ ಸತ್ಯಕ್ಕೆ ಹತ್ತಿರ, ಹತ್ತಿರವೇ!....... .... ನಿಂದಾಸ್ತುತಿ!! ಅಷ್ಟೇ.

ನೀವೂ ಕೂಡ ನನ್ನ ಹಾಗೆಯೇ ಮನುಜರ ಸೇವೆ ಮಾಡುವ ಆಸೆಯನ್ನು ಬಿಟ್ಟು ದೇವರ ಸೇವೆ ಮಾಡಿ. ಆಗ ಮನುಜರ ಸೇವೆ ಮಾಡೋದು ಬಲು ಸುಲಭ.

ಈಗಿನ ಮನುಜರು ಕೇವಲ ಮಕ್ಕಳು ಅನ್ನೋದನ್ನ ಮರೆಯಬೇಡಿ!

ತಿಳಿದವರಿಗೆ ಹೆಚ್ಚು ಹೇಳಬೇಕೇ?

ಒಂದು ವಿಷಯ ಹೇಳಬಹುದು.

ನಿಮ್ಮ ಕೊಂಕನ್ನು ಸರಿಪಡಿಸಲು, ಒಲವಿನ ರೂಪೇ ಆಗಿರುವ, ಮಾನವೀಯತೆಯ ಕುರುಹೇ ಆಗಿರುವ, ದೈವಾಂಶನಿಗೆ, ಏನೆಲ್ಲ ಗೋಳು ತಂದೊಡ್ಡಿದ್ದೀರಿ. ಯೋಚನೆ ಮಾಡಿ ಎಂದು ಹೇಳಬೇಕು ಅನ್ನಿಸುತ್ತೆ.

ಮಾನ್ಯರೇ! ಮಾನ್ಯತೆಯನ್ನು ಮರೆತು, ಮೆಸ್—ಆನ್ ಅನ್ನುವುದನ್ನು ಅಳಿಸಿ, ಶೂನ್ಯ ಸಂಪಾದನೆ ಮಾಡಿ.

ಆಗ ನಾವಿಬ್ಬರೂ ಮನು, ಜ, ರ ಸೇವೆಯನ್ನು ಎದೆ ತುಂಬ ಮಾಡಬಹುದು.

ನಿಮ್ಮ ಹತಾಕಾಂಕ್ಷಿ ಹಾಗೂ ಹಿತಾಕಾಂಕ್ಷಿ

O

ಶಾಲೆಗಳ ಬಳಿಯಲ್ಲಿ ವಾಹನ ಸಂಚಾರವನ್ನು ಶಾಲಾ ಬಾಲಕರೇ ನಿರ್ದೇಶಿಸುವ ಏರ್ಪಾಡನ್ನು ಮದರಾಸಿನಲ್ಲಿ ಈಗ ಜಾರಿಗೆ ತಂದಿದ್ದಾರಂತೆ

—ಏನು ಮಹಾ! ಲಾಗಾಯ್ತಿನಿಂದಲೂ ನಮ್ಮ ಕೇರಿ ಬಾಲಕರು ಎಲ್ಲಾ ರಸ್ತೆಗಳಲ್ಲೂ ವಾಹನ ಸಂಚಾರವನ್ನು ತಮ್ಮ ಮನಸ್ಸಿಗೆ ಬಂದ ಹಾಗೆ ನಿರ್ದೇಶಿಸುತ್ತಲೇ ಇದಾರೆ.

* * * *

ಪಾಕಿಸ್ಥಾನದಲ್ಲಿ ಕೆಲವು ಭಾರತದ ಚಲನ ಚಿತ್ರಗಳನ್ನು ವಶಪಡಿಸಿಕೊಂಡರಂತೆ.

—ನಾವು ನೋಡಿದ ಇನ್ನೂ ಕೆಲವು ಚಿತ್ರಗಳನ್ನು ಪಾಕೀಸ್ಥಾನೀಯರು ವಶಪಡಿಸಿಕೊಂಡು ಸುಟ್ಟುಬಿಟ್ಟರೆ ಕ್ಷೇಮವೇನೇ!

* * * *

ಮದುವೆಯಾದರು, ಹೋದರು !

—:o:—

ಕೆದರುಗೇಶದ ಕೇಶಮುಖಿ, ಅಹ ! ಶೂರ್ಪನಖಿಯೊಲು ಸುಂದರಿ
ಬೆದರುಗಣ್ಣಿನ ಬದಗಿ ತರಲೆಗೆ ಒದಗಿ ಕುಕ್ಕುಟ ಕಂಧರಿ
ಮಿಶ್ರವರ್ಣೆ ಮಹೋಗ್ರರೂಪೆ ಕಠೋರಭಾಷಿಣಿ ಕರ್ಕಶೆ
ಆ ಹುಡುಗಿ ಏನಾದಳು ?
ಮದುವೆಯಾದಳು ಹೋದಳು !

ಮಂದಹಾಸೆ ಮರಾಳಗಮನೆ ಕರಾಳಕುಂತಳೆ ಕಾಮಿನಿ
ಕೆಂದಧಾವಳಿ ಹಸಿರು ಲಂಗದ ಸುಂದರಾನನೆ ಕೋಮಲೆ
ಏಳು ರಸ್ತೆಯ ಮಾರಿ ಸೈಕಲ್ ಪೋರಿ ಅವಳೇನಾದಳು ?
ಮದುವೆಯಾದಳು ಹೋದಳು !

ತುಂಬುದೇಹದ ತುಂಬುವಕ್ಷದ ತುಂಬುಚರಿತೆಯ ಚಂಚಲೆ
ಜಾರು ನೈಲಾನ್ ಸೀರೆ, ನೋಟವೊ ಓರೆ, ಕದನ ಕುತೂಹಲೆ
ಹಿಂದಿಯೋದುವ ಹುಡುಗಿ ಹೃದಯದ ತುಡುಗಿಯವಳೇನಾದಳು ?
ಮದುವೆಯಾದಳು ಹೋದಳು !

ಪಂಚವಿಂಶತಿ ಶರದ ಶಿಶಿರರ ಕಂಡ ಬಿಂಕದ ಬಾಲಕಿ
ಬಿಳಿಯ ಸೀರೆಯ ನೀಲಿ ಚೋಳಿಯ ಛಲಮನದ ನೀಲಾಳಕಿ
ರಾಜ ಕಾಣದ ರಾಣಿ ವರಹಯವೇಣಿಯವಳೇನಾದಳು ?
ಮದುವೆಯಾದಳು ಹೋದಳು !

ಸೊಬಗಿ ರೋಹಿಣಿ ಸೊಗಸುಗಾತಿ ವಸಂತ ವಿಮಲವಿಲಾಸಿನಿ
ಮರದ ಮನೆ ಕರಿಬಸವಿ ಬೀಕಲಿಬೆಟ್ಟಿ, ಶೈಲಜ ಪದ್ಮಿನಿ
ಜಗಳಗಂಟಿ ಜುಬೇವ ಜರ್ಬಿನ ಜಾನಕಿಯರೇನಾದರು ?
ಮದುವೆಯಾದರು ಹೋದರು !

—ಕವಿಕುಲಲಾವು

"ದೂದ ಪೇಡ ಕೊಟ್ಟಾಗ"

ಸರೋಜ ಮದುವೆ ಮಾಡಿಕೋತೀನಿ ಅಂತ ಹೇಳಿದಾಗ ಹತ್ತು ನಿಮಿಷ ನಮಗೆ ಥಂಗು ಬಡಿದುಹೋಯ್ತು. ಎಂ.ಎಸ್.ಸಿ., ಪಾಸುಮಾಡಿ ಮಾಸ್ತರಿಣಿ ಕೆಲಸಕ್ಕೆ ಮೂರೂಜನ ಸೇರಿಕೊಂಡು ಹತ್ತು ವರ್ಷ ಆಗಿತ್ತು. ನಮ್ಮ ಬುದ್ಧೀಗೆ ಸರಿಯಾಗಿ, ಅಂತಸ್ತಿಗೆ ಅನುಕೂಲವಾಗಿ, ಹೇಳಿದ ಹಾಗೆ ಕೇಳಿಕೊಂಡಿರೋ ಲಕ್ಷಣ ವಂತ ಸಿಗದೇ ಇದ್ದರೆ ಮದುವೆ ಮಾಡಿಕೊಳ್ಳೋದೇ ಇಲ್ಲ ಎಂದು ಮೂವರೂ ಮಾತನಾಡಿಕೊಂಡಿದ್ದೆವು. ದೀಪಾವಳಿ ರಜೆಗೆ ಅಂತ ಸೋದರತ್ತೆ ಮನೆಗೆ ಹೋದೋಳು ಬರ್ತಿದ್ದ ಹಾಗೇ, ಮಧ್ಯಾಹ್ನ ತಿಂಡಿ ತಿನ್ನೋವಾಗ ಬಲು ಸಿಹಿ ಯಾಗಿದ್ದ ಧಾರವಾಡದ ದೂದ್‌ಪೇಡ ಕೊಟ್ಟು "ನಾನು ಮದುವೆ ಮಾಡಿಕೋತೀನಿ" ಎಂದಾಗ ಅರ್ಧ ದೂದ್‌ಪೇಡ ಬಾಯೊಳಗೆ, ಅರ್ಧ ಹೊರಗೆ ಹಾಗೇ ನಿಂತು, ಥಂಗು ಬಡಿದುಹೋಯ್ತು.

"ಯಾರೇ! ಏನ್ಮಾಡ್ತಿದಾನೆಯೇ"

"ಹ್ಯಾಗೆ ಸಿಕ್ಕಿದನೇ! ಸಂಬಳ ಎಷ್ಟೇ!"

"ಮೊದಲು ಗೊತ್ತಿತ್ತೇನೇ? ವಯಸ್ಸೆಷ್ಟೆ?"

ದೂದ್‌ಪೇಡದ ಅವಶೇಷ ಇನ್ನೂ ಬಾಯಲ್ಲಿದ್ದಾಗಲೇ ಪ್ರಶ್ನೆಗಳ ಸುರಿ ಮಳೇನೇಸುರಿಸಿದೆವು.

ಬೆರಳ ಮಡೀಪೆಟ್ಟಿಗೆ—ಬೆರಳಲ್ಲಿ ಹಿಡಿದುಕೊಳ್ಳೋ ಬೆತ್ತದ ಚೀಲ—ಅದನ್ನು ಕೊಂಕಿನಿಂದ ತೆರೆದು ಒಂದು ಫೋಟೋ ತೋರಿಸಿದಳು. ಫಿನ್ಲೆ ಪಂಚೆಗಳ ಮೇಲೆ ಮನ್ಮಥನ ಹಾಗೆ ಇರುವ ಫೋಟೋ ಇರುಲ್ವೆ ಅದರ ಹಾಗೇ ಇತ್ತು ಆ ಮುಖ ಸ್ವಲ್ಪ ಹೊಟ್ಟೆಕಿಚ್ಚಾಯ್ತು ನಮ್ಮಿಬ್ಬರಿಗೂ.

ಅಮೆರಿಕಾಗೆ ಹೋಗಿ ಬಂದಿದಾರೆ. ಊರಲ್ಲಿ ಆಸ್ತಿಪಾಸ್ತಿ ಸಾಕಷ್ಟಿದೆ. ನಲವತ್ತಾಗಿಲ್ಲ, ಧಾರವಾಡದಲ್ಲಿ ದೊಡ್ಡ ಕೆಲಸ ಸಿಗೋಹಾಗಿದೆ. ಅಮೆರಿಕಾದಲ್ಲಿ ಅವರ ಜತೇಲಿ ಓದ್ತಾ ಇದ್ದೋರೊಬ್ಬರು ಈಗ ದಿಳ್ಳೀಲಿ ಪ್ರಭಾವಶಾಲಿಗಳಾಗಿದಾರೆ. ನಮ್ಮ ಸೋದರತ್ತೇಗೆ ದೂರದ ಸಂಬಂಧ. ಅವರ ಮನೆಗೆ ಬಂದಿದ್ದರು. ಅಲ್ಲಿ ನಾನಿದ್ದೆ. ಪರಸ್ಪರ ಪರಿಚಯ ಮಾಡಿಸಿದಳು, ಸೋದರತ್ತೆ. ಷಟಲ್‌ಕಾಕ್ ಆಡುಕ್ಕೆ ಹೋಗ್ತಿಧೀನಿ ಬರ್ತಿರಾ ಅಂದರು. ಹ್ಞೂ ಅಂತ ಹೋದೆ. ಎರಡು ಆಟದಲ್ಲೂ ಅವರು ಸೋತರು. ಬಲ್ಚೆನ್ನಾಗಿ ಆಡ್ತೀರಿ, ನರಪೇತಲ ಹೆಂಗಸರನ್ನ ಕಂಡರೆ

ನನಗಾಗುಲ್ಲ ಅಂದರು. ಗೆಲ್ಲೋ ಗಂಡಸರನ್ನ ಕಂಡರೆ ನನಗೂ ಆಗುಲ್ಲ ಎಂದೆ ನಾನು. ಸರಿ, ಮೂರು ದಿನದಲ್ಲಿ ಸೋದರತ್ತೆ ಕೇಳಿದಳು. "ಏನೇ ಮೀನು! ಬಿಂದು ಮಾಧವನ್ನ ಮದ್ವಿ ಆಗ್ತೀಯಾ ಕೇಳಂತ ಹೇಳಿದ" ಅಂದಳು. ಹ್ಯಾಗೆ ಹ್ಯಾಗೋ ಆಗ್ತಾ ಇತ್ತು ನನಗೂನು. ನೀನ್ಹೇಗೆ ಹೇಳಿದ್ರೆ ಹಾಗೆ ಅತ್ತೆ, ಈ ತನಕ ಚೆಂದಾಗೇ ಇಧೀನಿ ಎಂದೆ.

"ಹಂಗಾರ ಮದ್ವಿ ಆಗು, ನಮ್ಮ ಬಿಂದೂಗೆ ಒಂದು ನೆರೆ ಸಿಕ್ಕಿದ್ಹಾಂಗ ಆತು" ಎಂದಳು.

"ಇನ್ನೊಂದು ವಾರದಲ್ಲಿ ರಾಜೀನಾಮೆ ಕೊಟ್ಟು ಹೋಗ್ತೀನಿ" ಎಂದಳು.

"ಅಷ್ಟು ಬೇಗ ಹೊರಟು ಹೋಗ್ತೀಯೇನೇ?"

"ಈ ತಿಂಗಳೇ ಮದುವೇನೇನೇ! ಧಾರವಾಡದಲ್ಲೇನೇ?"

"ಇನ್ನು ಯಾರ್ಧತ್ತಿರಾನೇ ನಾವು ಸಿಕ್ಕಾಪಟ್ಟೆ ಹರಟೆ ಹೊಡೆಯೋದು"

"ನಮ್ಮಿಬ್ಬರನ್ನೂ ತಬ್ಬಲಿ ಮಾಡಿ ಹೋಗ್ತೀಯಲ್ಲೇ"

ಇಬ್ಬರೂ ಅವಳನ್ನು ತಬ್ಬಿಕೊಂಡು ಅಳೋದೊಂದು ಬಾಕಿ. ಆದರೆ ಇಬ್ಬರಿಗೂ ೨ ಗಂಟೆಗೆ ಪಾಠ ಇದ್ದಿದ್ದರಿಂದ, ತರಗತಿಗಳಿಗೆ ಹೋದೆವು. ಸಂಜೆ ಮುಂದೆ ಮೂವರೂ ಸೇರಿ ನಾನು ವಾರ್ಡನಾಗಿದ್ದ ಹಾಸ್ಟಲಿನಲ್ಲೇ ಊಟ ಮಾಡಿ ಮಲಗಿದೆವು.

* * * *

ಏನೇನೋ ಕೆಲಸ ಇದ್ದ ಕಾರಣ ನಾವಿಬ್ಬರೂ ಅವಳ ಮದುವೆಗೆ ಹೋಗುಕೆ ಆಗಲಿಲ್ಲ. "ಬನ್ರೇ! ನಿಮಗೂ ಯಾರ್‍ಯಾರೂ ಸಿಗಬಹುದು" ಅಂತ ಎಷ್ಟೋ ಪ್ರೀತಿಯಿಂದ ಕರೆದಿದ್ದಳು. ಆದರೂ ಪರೀಕ್ಷೆ ಹತ್ತಿರಕ್ಕೆ ಬರ್‍ತಾ ಇತ್ತು ಮನೆ ಪಾಠಕ್ಕೆ ಬರೋ ಹುಡುಗಿಯರನ್ನು ಈ ಕಾಲದಲ್ಲಿ ಬಿಟ್ಟು ಹೋಗೋದು ಒಳ್ಳೇದಲ್ಲ ಅಂತ ಹೋಗಲಿಲ್ಲ.

ಒಂದಂಗುಲ ಉದ್ದದ ವಾರಣವಾದ ಬೆಳ್ಳಿ ತೊಟ್ಟಿಲನ್ನು ನಾನು ಮದುವೆ ಉಡುಗೊರೆಯಾಗಿ ಕಳಿಸಿದೆ. 'ಮಕ್ಕಳ ರಕ್ಷಣೆ' ಅನ್ನೋ ಸ್ಪಾಕ್ಸ್ ಪುಸ್ತಕಾನ ಸೀತಾ ಉಡುಗೊರೆಯಾಗಿ ಕಳಿಸಿದಳು. ಕಾಲೇಜ ಹುಡುಗಿಯರೆಲ್ಲ ದೊಗಲೆ ಉದ್ದಾನೆ ಸ್ವೆಟರೊಂದನ್ನು ಹಾಕಿ ಉಡುಗೊರೆ ಕಳಿಸಿದರು.

ಮದುವೆ ಫೋಟೋಗಳನ್ನು ಮೀನಾಕ್ಷಿ ಕಳಿಸಿದಳು. ವಾರಕ್ಕೊಮ್ಮೆ ತಪ್ಪದೆ ಮೊದಲ ತಿಂಗಳು ಕಾಗದ ಬರೆದಳು. ತಿಂಗಳಿಗೊಮ್ಮೆ ಒಂದು ವರ್ಷ ಕಾಗದ ಬರೆದಳು. ಮದುವೆ ವರ್ಷದ್ಹಬ್ಬಕ್ಕೆ ನಾವಿಬ್ಬರೂ ಸೇರಿ ಮಗುವಿನ ಮೆದುಬ್ಲಾಂಕೆಟ್ ಒಂದನ್ನು ಕಳಿಸಿದೆವು. "ನೀವು ಬರ್ತೀರಿ" ಅಂತ ಕರೆದರೆ ಇದನ್ನು ಯಾಕೆ ಕಳಿಸಿ ದಿರಿ ಅಂತ ಕಾಗದ ಬರೆದಳು.

ಸೀತಾ ಹೇಳಿದಳು " ಓಹೋ ಏನೋ ಅಚಾತುರ್ಯ ಆಗಿದೆ ಕಣೆ. ಮಗು ಬ್ಲಾಂಕೆಟ್ ಕಳಿಸಿದ್ದು ಅವಳಿಗೆ ಚುರ್ ಅನಿಸಿದೆ. ಹೋಗಿ ವಿಚಾರಿಸಿಕೊಂಡು ಬರಬೇಕು ಕಣೆ" ಎಂದು

ನನಗೂ ಹಾಗೆ ಅನ್ನಿಸಿತು. " ಈ ಸರ್ತಿ ನಮಗೆ ರಜಾ ಬಂದಾಗ, ಅಲ್ಲಾ ಕಾಲೇಜಿಗೆ ರಜಾ ಬಂದಾಗ, ಹೋಗಿ ಅವಳ ಜತೇಲಿ ಒಂದು ವಾರ ಇದ್ದು ಬರೋಣ" ಎಂದು ಹೇಳಿದೆ.

ಕ್ರಿಸ್‌ಮಸ್ ಹಬ್ಬಕ್ಕೆ ಹೋಗೋದು ಅಂತ ನಿರ್ಧಾರ ಮಾಡಿದೆವು. ಮೀನಾಕ್ಷಿಗೂ ಈ ಸುದ್ದಿ ತಿಳಿಸಿದೆವು. " ಆ ಊರು ನಮಗೆ ತಿಳಿಯದು ಸಾಧ್ಯ ವಾದರೆ ಸ್ಟೇಷನ್ನಿಗೆ ಬರೋದು" ಎಂದು ಬರೆದಿದ್ದೆವು.

ಒಂದು ಬುಟ್ಟಿ ಬೆಂಗಳೂರು ತರಕಾರಿ, ಒಂದು ಬುಟ್ಟಿ ಅವರೆಕಾಯಿ, ಒಂದು ಬುಟ್ಟಿ ಹಣ್ಣು, ಎರಡು ಕೈಬುಟ್ಟಿಗಳು ಹಿಡಿದು ಪ್ರಯಾಣ ಹೊರಟೆವು. ಧಾರವಾಡ ಸ್ಟೇಷನ್ನಿನಲ್ಲಿ ಇಳಿದಾಗ ಮೀನು ಎಲ್ಲೂ ಕಾಣಿಸಲಿಲ್ಲ. ಅವಳ ಮನೆ ವಿಳಾಸ ನಿನ್ನ ಹತ್ತಿರ ಇದೆಯಲ್ಲವೇನೇ?" ಎಂದೆ. " ನಿನ್ನ ಹತ್ತಿರ ಇಲ್ಲವೇನೇ ನೀ ತರ್ತೀ ಅಂತಿದ್ದೆ" ಎಂದಳು ಸೀತಾ. ಇಬ್ಬರ ಮುಖವೂ ಪೆಚ್ಚು

ಅಷ್ಟು ಹೊತ್ತಿಗೆ ಆರಡಿ ಎತ್ತರವಿದ್ದ, ಅರ್ಧಡಿ ಅಡ್ಡಗಲ ಇದ್ದ, ತೆಳ್ಳಾನೆ ಜುಬ್ಬ ಧರಿಸಿದ ಉದ್ದಾನೆ ಚೊಳ್ಳ ಹಾಗಿದ್ದ, ಸಾಧುವಿನ ಹಾಗೆ ಕಾಣಿಸುತ್ತಿದ್ದ ಒಬ್ಬಾತ ಬಂದು " ಕ್ಷಮಿಸಿ, ಬೆಂಗಳೂರಿಂದ ಬಂದಿದ್ದೀರಾ" ಎಂದು ಬಲು ವಿನಯ ವಾಗಿ ಕೇಳಿದ. " ಹೌದಪ್ಪಾ! ನೀವ್ಯಾರಪ್ಪಾ! ಯಾವುದಾದರೂ ಹೋಟಲಿನ ಏಜಂಟರಾ! ಬೆಂಗಳೂರಿಂದ ಬಂದಿದ್ದೀವಿ. ನಮ್ಮ ಸ್ನೇಹಿತೆ ಬರ್ತಾಳೆ ಅಂತಿದ್ದೆವು. ಅವಳ ಮನೆ ವಿಳಾಸ ತರೋದು ಮರೆತವು. ಈ ಸಂಜೆ ಹೋಟಲಲ್ಲಿಳಕೊಂಡು ನಾಳೆ ಮುಂಜಾನೆ ಅವಳ ಮನೆ ಹುಡುಕಬೇಕು. ಯಾವುದಾದರೂ ಒಳ್ಳೇ ಸಭ್ಯಸ್ಥರ ಹೋಟಲು ಎಲ್ಲಿದೆ ಹೇಳ್ತೀರಾ" ಎಂದೆ ನಾನು. ಪ್ರಾಣಿ! ಆ ತನಕ ತನ್ನ ಚಪ್ಪಲೀನ ನೋಡ್ತಾ ಇದ್ದನೇ ಹೊರತು ತಲೆ ಎತ್ತಿರಲಿಲ್ಲ. ನಾನು ಮಾತು ಮುಗಿಸಿದ ಮೇಲೆ ನಯವಾಗಿ " ಸೀತಾದೇವಿ, ಕೃಷ್ಣಾಬಾಯಿ ಅಂತಲೇ ನಿಮ್ಮ ನಾಮಧೇಯ" ಎಂದು ಕೇಳಿದ.

" ನಮ್ಮ ಹೆಸರು ನಿಮಗೆ ಹ್ಯಾಗೆ ತಿಳಿಯತಪ್ಪ! ಬುಟ್ಟಿಗಳ ಮೇಲೆ ನಮ್ಮ ಹೆಸರು ಹಾಕಿಲ್ಲವಲ್ಲ" ಎಂದಳು ಸೀತಾ. ಅವಳು ಸ್ವಲ್ಪ ದುಡುಕು.

" ಮೀನು ಬರುಕ್ಕೆ ಆಗಲಿಲ್ಲ. ನೀವೇ ಹೋಗಿ ಸ್ಟೇಷನ್ನಿಂದ ಕರಕೊಂಡು ಬನ್ನಿ ಅಂತ ನನ್ನ ಕಳಿಸಿದಳು. ಪ್ರಯಾಣ ಸುಖವಾಗಿತ್ತಾ" ಎಂದ ಆತ.

" ನೀವು....ಮೀನು ಯಜಮಾನ್ರೇ! ತುಂಬಾ ಸಂತೋಷ" ಎಂದೆ.

" ಹಾಗಾರ ಬೇಗ ಮನೆಗೆ ಹೋಗೋಣ, ಗಾಡಿ ಗೊತ್ತುಮಾಡ್ತೀರಾ" ಎಂದಳು ಸೀತ. ಏನು ಅವಸರವೋ ಅವಳಿಗೆ. ಎರಡು ಆದರದ ಮಾತಿಗೂ ಬಿಡುವಿಲ್ಲ.

" ನನ್ನ ಕಾರ್ ತಂದಿದೀನಿ, ಬರ್ರಿ ಹೋಗೋಣ" ಅಂತ ಹೇಳಿ, ಕೂಲಿಯುವ ನನ್ನ ಕರೆದು, ನಮ್ಮ ಬುಟ್ಟಿಗಳನ್ನು ಸಾಗಿಸಿಕೊಂಡು, ಕಾರ್ ನಿಲ್ದಾಣದ ಕಡೆಗೆ ಮುಂದು ನಡೆದರು, ಮಾನು ಗಂಡ.

ಪುಟಾಣಿ ಕಾರು. ಮೇಲ್ಭಾವಣಿಯಲ್ಲಿ ಬುಟ್ಟಿಗಳನ್ನಿರಿಸಿದ. ಕೂಲಿ ಹಣವನ್ನು ಅವನೇ ಕೊಟ್ಟು " ಕೂಡ್ರಿ ಅಂತ" ಬಾಗಿಲು ತೆಗೆದ. ನಾವಿಬ್ಬರೂ ಹಿಂದಾಗಡೆ ಕೂತೆವು. " ಪುಟಾಣಿ ಕಾರು ಇಕ್ಕಟ್ಟಾಯ್ತೇನೋ, 7. H. P." ಎಂದ. ಇಕ್ಕಟ್ಟೇನು ಬಂತು. ಸೀತಾ, ಹಾಗೂ ನಾನು ಸ್ವಚ್ಛಂದವಾಗಿ ಬೆಳೆದವರು. ಒತ್ತೊತ್ತಿ ಕೂತುಕೊಂಡರೆ ಬಾಗಿಲು ಹಾಕಲು ಸಾಧ್ಯವಾಗ್ತಿತ್ತು. ಕೂತುಕೊಂಡು, ಕಾರು ಪುಟಾಣಿಯಾದರೆ, ಸಾಕೋದು ಸುಲಭ ಎಂದೆ ನಾನು. ಅವನೂ ಕೂತ, ಕಾರನ್ನು ಹೊರಡಿಸಿದ. ಮೆಲ್ಲ ಮೆಲ್ಲಗೆ ಆದರೂ ಧೂಳೆಬ್ಬಿಸುತ್ತ ಕಾರು ಹರಿಯಿತು. ಹೊಡೆದೆಬ್ಬಿಸಿದ ಧೂಳೆಲ್ಲ ಹಿಂತಿರುಗಿ ಹಿಂದೆ ಕೂತಿದ್ದ ನಮ್ಮ ಮೇಲೆ ಕವಿಯುತ್ತಿತ್ತು. ಅರ್ಧ ತಾಸು ಆಗಿರಬಹುದು ಇನ್ನೂ ಕಾರು ಸಾಗುತ್ತಲೇ ಇತ್ತು.

" 7. H. P. ಅಂದಿರಾ! ಏಳು ಅಶ್ವಗಳ ಶಕ್ತಿ ಅಲ್ಲವೆ? ಜಟ್ಕಾಕ್ಕೆ ಕಟ್ಟೋ ಅಶ್ವಗಳಿರಬೇಕು. ಅದೂ ಕುಂಟಾದ ಅಶ್ವಗಳಿರಬೇಕು" ಎಂದಳು ಸೀತಾ. ಬಲು ದುಗುಡು ಸ್ವಭಾವ, ಬಲು ಅವಸರ ಅವಳಿಗೆ.

" ಬಲು ಚಂದದ ಮಾತಾಡ್ತೀರಿ, ಇದೇ ನಮ್ಮನಿ ಎಂದ. ಎರಡೇ ನಿಮಿಷದಲ್ಲಿ ದೊಡ್ಡ ಮಹಡಿ ಮನೆ ಎದುರಿಗೆ ಕಾರು ನಿಲ್ಲಿಸಿದ. ನಿಲ್ಲಿಸಿದ ಕೂಡಲೇ ಸೀತಾ ಇಳಿದು ಮನೆಯೊಳಕ್ಕೆ ಓಡಿದಳು. ಮಾನು ನೋಡುಕ್ಕೆ ಇಷ್ಟು ಆತುರಪಟ್ಟರೆ ಚೆಂದ ಕಾಣಿಸುಲ್ಲ ಅಂತ ನನಗನ್ನಿಸಿತು. ಅಲ್ಲೇ ನಿಂತು ಸಾಮಾನೆಲ್ಲವನ್ನೂ ಇಳಿಸಿದ ಮೇಲೆ ಒಳಕ್ಕೆ ಹೋದೆ.

ತೊಟ್ಟಿಯಲ್ಲಿ ಆರಾಮುಕುರ್ಚಿಯ ಮೇಲೆ ಮಾನು ಬಾಗಿಲ ಹತ್ತಿರ ಕೂತಿದ್ದಳು. ತೊಡೆಯಮೇಲೊಂದು ಉಂಡೆ, ಕೈಯಲ್ಲೆರಡು ಹೆಣೆಯುವ ದಬ್ಬಳಗಳು. ಪುಟಾಣಿಯದೊಂದನ್ನು ಹೆಣೆಯುತ್ತಿದ್ದಳು.

" ಇದಕ್ಕೇ ಸ್ಟೇಷನ್ನಿಗೆ ಬರಲಿಲ್ಲವೇನೇ! ತುಂಬಾ ಸಂತೋಷ ಕಣೆ" ಎಂದು ಹೇಳುತ್ತ ಆರಾಮುಕುರ್ಚಿಯ ಬಳಿಯೇ ಕುಳಿತುಕೊಂಡೆ. ಅಷ್ಟು ಹೊತ್ತಿಗೆ ಒಳಗಿನಿಂದ ಸೀತಾ ಬಂದಳು. ಅವಳ ಸಂತೃಪ್ತಿ ತುಂಬಿದ ಮುಖ ನೋಡಿದೆ. ಕಣ್ಣು ಕಣ್ಣು ಮಿಲಾಯಿಸಿ, ಮಾನು ತೊಡೆಯ ಬಳಿಗೆ ದೃಷ್ಟಿ ಹರಿಸಿದೆ. ಅವಳೂ ಮಾನೂ ತೊಡೆಯನ್ನು ನೋಡಿದಳು.

" ಹೀಗೇನೇ! ಅದಕ್ಕೇ ಸ್ಟೇಷನ್ನಿಗೆ ಬರಲಿಲ್ಲ. ಒಳ್ಳೇ ಕೆಲಸ ಮಾಡಿದೆ. ನೀ ಬಯಸಿದ ತರಕಾರೀನೇ" ಎಂದು ಗಹಗಹಿಸುತ್ತ ಆರಾಮ ಕುರ್ಚಿಯ ಆ ಕಡೆಯಲ್ಲಿ ಕುಳಿತುಕೊಂಡಳು ಸೀತಾ.

ಮಿಸಾನು ಅರೆನಗೆ ಸೂಸುತ್ತಿದ್ದಳು. ದಟ್ಟಳಗಳೆರಡನ್ನು ಕೊಡೆಯ ಮೇಲೆ ಇರಿಸಿ ನಮ್ಮಿಬ್ಬರ ತೋಳುಗಳ ಮೇಲೂ ತನ್ನ ಅಂಗೈ ಹಾಕಿದಳು. ನೆಲ್ಲಿಕಾಯಿ ಮುರಬ್ಬ ತಿಂದ ಹಾಗೆ ನಮ್ಮಿಬ್ಬರಿಗೂ ತಂಪು ಕಂಡಿತು. ಆಗ ಆತ ಬಂದ. ನಮ್ಮೂವರನ್ನೂ ನೋಡಿದ.

"ಸಾಮಾನೆಲ್ಲವನ್ನೂ ಕೊಠಡಿಯಲ್ಲಿ ಇರಿಸಿದ್ದೇನೆ. ನೀವು ಮೂವರೂ ಮಾತನಾಡೋದು ತುಂಬಾ ಇದೆ. ನಂಗೊತ್ತು. ಪಾರ್ವತಿ ಪೂಜ್ಯಾಗ ಶಿವ ಬಂದ್ಹಾಂಗ ನಾ ಬರೋದು ಚೆಂದಲ್ಲ. ವಾಸುದೇವಂಗೆ ಹೇಳ್ತೀನಿ. ಇಲ್ಲೆ ತಿನುಸು ತಂದು ಕೊಡು ಅಂತ. ಬರೆಯೋ ಕೆಲಸಾನೂ ನಂಗದೆ. ಮುಂಜಾನಿ ಭೆಟ್ಟಿ ಯಾಗ್ತೀನಿ, ಆಗ್ಬಹುದಲ್ಲ" ಎಂದ ಮಿಸಾನು ಗಂಡ.

ಮಿಸಾನು ಅವನ್ನ ನೋಡಿದಳು. ಅವಳನ್ನ ನಾವಿಬ್ಬರೂ ನೋಡಿದೆವು. ಏನು ಸಂತಸದ ನೋಟ ಮಿಸಾನೂದು! ನಮಗೂ ಹಾಯೆನಿಸಿತು.

ಮಹಡಿ ಮೆಟ್ಟಿಲ ಮೇಲೆ ಅವ ಹತ್ತಿ ಹೋದ ಸಪ್ಪಳ ಕೇಳಿಸಿತು. ಬಾಗಿಲು ಬಡಿದ ಸದ್ದು ಕೇಳಿಸಿತು.

"ಏನೇ ಮಿಸಾನೂ ಬರಿಯಬಾರ್ದಾಗಿತ್ತೇನೆ" ಎಂದೆ.

"ಎಂಟು ತಿಂಗಳಾಗಿದೆಯೇನೆ?" ಎಂದಳು ಸೀತಾ, ತಿಳಿದವಂತೆ, ಕನ್ಯೆ.

"ಹೆಣ್ಣಾದರೆ, ಸೀತಾ ಅಂತ ಹೆಸರಿಡಬೇಡಮ್ಮಾ-ಅವಸರ ಪ್ರಕೃತಿ, ದುಡು ಕುವ ಚಾಳಿ ಬೇಡ" ಎಂದೆ.

"ಗಂಡಾದರೆ, ಕೃಷ್ಣಾ ಅಂತ ಹೆಸರಿಡಬೇಡಮ್ಮಾ ಕಂಡ ಒಲವಿನ ಬಳಿ ಓಡಿ ಹೋಗೋ ಪ್ರಕೃತಿ, ಮರುಗುವ ಚಾಳಿ, ಬೇಡ" ಎಂದಳು ಸೀತಾ.

ಮಿಸಾನು ಆಗ ಸಿಕ್ಕಾಪಟ್ಟೆ ನಕ್ಕಳು. ಉಸಿರು ಸಿಕ್ಕಿ ಹಾಕಿಕೊಳ್ಳುವಂತೆ ಪಕ್ಕೆ ಹಿಡಿದುಕೊಂಡು ನಕ್ಕಳು.

"ಹಾಗಲ್ಲ, ಕಣ್ರೀ, ಪುಟಾಣಿ ಕಾರನ್ನ ಕೊಂಡುಕೊಂಡೆವು. ಇಬ್ಬರೇ ಇದ್ದರೂ ಹತ್ತಿರ ಹತ್ತಿರ ಇರಬಹುದು ಅಂತ. ಧಾರವಾಡದಲ್ಲಿ ಥಂಡಿ ಹೆಚ್ಚು. ಅದಕ್ಕೇ ಫ್ಲಾನಲ್ ಹೊದಿಕೇನ, ಕಾರಿಗೋಸ್ಕರ ಹೆಣೆಯುತ್ತಿದ್ದೇನೆ.

ನೀವು ಬರ್ತೀರಿ ಅಂತ ಕಾಗದ ಬಂದಾಗ, ಅದನ್ನೋದಿದಾಗ, ಮಹಡಿ ಹತ್ತಿ ಹೋಗಿ, ಸುದ್ದಿ ತಿಳಿಸೋಣ ಅಂತ ಓಡಿದೆ. ಸೀರೆ ಅಂಚು ತೊಡರಿತು ಬಿದ್ದೆ. ಕಣ ಕಾಲು ಉಳುಕಿತು. ಮಹಡಿಮೇಲಿಂದ ಇವರು ಓಡಿಳಿದು ಬಂದರು. ಈ ಆರಾಮು ಕುರ್ಚಿಯಲ್ಲಿ ಕುಳ್ಳಿರಿಸಿದರು. ನಾನೆಲ್ಲಾ ನೋಡಿಕೋತೇನೆ. ಆರಾಮುಕುರ್ಚಿಯಲ್ಲಿ ಕೂತಿರು ಎಂದು ಅಪ್ಪಣೆ ಕೊಟ್ಟರು.

ಎಂದು ಹಿತನಗುತ್ತಾ ಮಿಸಾನು ಹೇಳಿದಳು.

ದೂದಪೇಡ ಕೊಟ್ಟಾಗ ಮಿಸಾನು ಹೇಳಿದ್ದು ದಿಟ.

ಕನವರಿಸಿಕೊಂಡಾಗ

ಕಣ್ಣಿಗೆ ಅಂಜನವನ್ನು ಹಾಕಿಕೊಂಡು ನೋಡಿ, ಯಥಾರ್ಥವಾದುದನ್ನು ಹೇಳುತ್ತೇನೆ, ಎಂದು ಸಂತೆಮಾಳದ ಅಂಚಿನಲ್ಲಿ, ಆಂಜನೇಯನ ಗುಡಿಯ ಹತ್ತಿರ ಮುದುಕಿಯೊಬ್ಬಳು ಕುಳಿತಿದ್ದಳು.

ಊರ ಪಟೇಲನ ಹೆಂಡತೀಗೆ ಬಹಳ ವ್ಯಸನವಾಗಿತ್ತು. ಈಚೀಚೆಗೆ ಗಂಡ ಮನೆಗೆ ಬಂದಾಗ ಜಗಳ ಕಾಯೋದನ್ನೇ ಬಿಟ್ಟುಬಿಟ್ಟಿದ್ದ. "ಏನೋ ಮಾಡಿದ್ದಾರೆ ಇವರು, ಇಲ್ಲದೆ ಇದ್ದರೆ ಮನೆಗೆ ಬಂದಾಗ ಬಾಲ ಮುದುರಿಕೊಂಡು ತೆಪ್ಪಗೆ ಇರ್ತಾರಲ್ಲ! ಇದರ ಮರ್ಮ ಏನು" ಅಂತ ಆಕೇಗೆ ದುಃಖವಾಗಿತ್ತು.

ಸಂತೇಲಿ ಸೀರೆ ಕೊಂಡುಕೊಳ್ಳಕ್ಕೆ ಅಂತ ಹೋದೋಳು, ಹೇಗೂ ಬಂದಿದೀನಿ, ಆಂಜನೇಯನ ಗುಡೀಗೂ ಹೋಗಿ ಅಡ್ಡಬಿದ್ದು ಬರೋಣ ಅಂತ ಆ ಕಡೆಗೆ ಹೋದಳು. ಅಲ್ಲಿ ಕೂತಿದ್ದ ಭವಿಷ್ಯ ಹೇಳೋ ಮುದುಕೀನ ಕಂಡಳು.

"ಇವಳ್ನೇ ಶಾಸ್ತ್ರ ಕೇಳೋಣ, ಇವರೇನು ಮಾಡ್ತಾ ಇದ್ದಾರೋ, ನನಗೆ ತಿಳೀದ ಹಾಗೆ?" ಅಂತ ಅವಳ ಹತ್ತಿರ ಹೋಗಿ ಕೂತುಕೊಂಡಳು. "ಹೀಗೆ ಹೀಗೆ ಸಮಾಚಾರ, ಈಚೀಚೆಗೆ ರೇಗೋದೇ ಇಲ್ಲ ನಮ್ಮ ಯಜಮಾನ್ರು ಅಂದಳು.

"ಹಂಗಾ! ಮಗಳೇ! ಹುಷಾರಾಗಿರ್ಬೇಕು, ಈ ಗಂಡಸರ ವಿಚಾರದಾಗ! ನೀ ಬಂದಿದ್ದು ಒಳ್ಳೇದಾಯ್ತು ಅಂಜನ ಹಾಕ್ಕೊಂಡು ನೋಡೋಕ್ಮುಂಚೆ ಒಂದೆರಡು ಪ್ರಶ್ನೆ ಕೇಳ್ತೀನಿ, ಯೋಚಿಸಿ ನಿಧಾನವಾಗಿ ಹೇಳು ಎಂದಳು ಮುದುಕಿ. ಆಮೇಲೆ ಕೇಳಿದಳು.

"ನೋಡು, ಮಗಳೇ! ಮನಸಲ್ಲಿರೋದು, ಕನಸಿನಾಗೂ ಬತ್ತೈತೆ. ಅದಕ್ಕೇನ ಪಟೇಲರು ಕನವರಿಸಿಕೊಂಡಾಗ ಏನಾರಾ ಏಳ್ತಾರಾ, ನೆಪ್ತಿ ಮಾಡಿಕೊಂಡು ಹೇಳು" ಎಂದಳು ಮುದುಕಿ.

"ಇದಕ್ಕೆ ನೆಪ್ತಿಯಾರ ಯಾಕ? ಮಲಗಿಕೊಂಡಾಗ, ನಿದ್ದೆ ಹತ್ತಿದಮ್ಯಾಗ, ಕಾಳಿ, ಕಾಳಿ ಅಂತ ಕನವರಿಸ್ಕೋತಾರೆ. ಅದಕ್ಕೇ ನನಗೆ ಅನುಮಾನ, ಏನ್ಮಾಡ್ತಾರೋ, ಅಂತ" ಎಂದಳು ಪಟೇಲನ ಹೆಂಡತಿ.

" ಕಾಳಿ, ಕಾಳಿ ಅಂತ ಕನವರಿಸ್ತಾರಾ ?" ಮುದುಕಿ.

" ಹ್ಞೂ!" ಪಟೇಲರ ಹೆಂಡತಿ.

" ಹಂಗಾ ! ಹಂಗಾರ ಪಟೇಲರ ಪ್ರಾಯ ಎಷ್ಟೊ !," ಎಂದಳು ಮುದುಕಿ.

" ಅಂಜನ ಹಾಕ್ಕೊಂಡು ನೋಡೋ ಆಕೆ, ನನ್ನ ಕಂಡ ಮ್ಯಾಗ, ನನ್ನ ಗಂಡನ ಪ್ರಾಯ ಹೇಳುಕ್ಕೆ ಬರಾಕಿಲ್ವಾ" ಎಂದಳು ಪಟೇಲರ ಹೆಂಡತಿ.

" ಸೈ ನೀನಂದದ್ದು ಆದರೆ ಪಟೇಲರ ಎಷ್ಟನೇ ಹೆಂಡ್ರು ನೀನು" ಎಂದು ಕೇಳಿದಳು ಅಂಜನದ ಮುದುಕಿ.

" ನಾಲ್ಕನೇ ಹೆಂಡ್ರು" ಎಂದಳು ಪಟೇಲನ ಹೆಂಡ್ತಿ.

" ಹಂಗಾ ! ಹಂಗಾರ ನಿಮ್ಮನೇ ಮುದಿ ಹಸುವಿನ ಹೆಸರು ಕಾಳಿ ಅಂತ ಅಲ್ವಾ ?" ಎಂದಳು ಅಂಜನದ ಮುದುಕಿ.

" ಅರೆ ! ಹೆಂಗಾರ ಗೊತ್ತಾಯ್ತು ನಿಂಗ" ಎಂದಳು ಪಟೇಲನ ಹೆಂಡ್ರು.

" ಅಂಜನ ಹಾಕ್ಕೊಂಡ್ರೆ ಎಲ್ಲಾ ಕಾಣ್ತೈತೆ-ಮುಪ್ಪಿನ ಪಟೇಲ ಕನವರಿಸಿಕೊಂಡರೆ, ಪ್ರಾಯದ ನೆನಪ್ನೇ ಅಲ್ವಾ !" ಎಂದಳು ಅಂಜನದ ಮುದುಕಿ.



" ಏನು ಬುದ್ಧಿ ಫೆಬ್ರವರಿನಾಗ ಎಂಟು ಗ್ರಹ ಸೇರಿ ದೇಶಕ್ಕೆ ದೊಡ್ಡ ಹಾನಿ ಆಗತ್ತಂತಲ್ಲ, ಅಂದ್ರೆ ಆ ತಿಂಗ್ಳಲ್ಲಿ ಇಲೆಕ್ಷನ್ ಆದಿ. ಆದರಲ್ಲೇನಾದ್ರು ಕಾಂಗ್ರೆಸ್‌ನೋರು ಮತ್ತೆ ಬರ್ತಾರ."

"ತಾತ! ವೈದ್ಯನಾಗ್ತೀನಿ"

ಅಂದ ಮರಿಮಗ. ಹಲ್ಲಿಲ್ಲದ, ಬೋಡಾಗಿದ್ದ, ಜೊಲ್ಲು ಸುರಿಸುತ್ತಿದ್ದ, ಮುತ್ತಜ್ಜನ ತೊಡೆಯಮೇಲೆ ಕುಳಿತು; ಹಲ್ಲು ಬರುತ್ತಿದ್ದ, ಬೊಳಾಗಿದ್ದ, ಜೊಲ್ಲು ಸುರಿಸುತ್ತಿದ್ದ ಮರಿಮಗ. ಅವನಿಗಿನ್ನೂ ಪ್ರಾಯ ಮೂರು.

ಮುತ್ತಜ್ಜನಿಗೆ ಎಚ್ಚರವಾಯ್ತು. ಚಿರಂಜೀವಿಯಾಗಿದ್ದ ನೆನಪು ಹೊಡೆದು ಎಬ್ಬಿಸಿತ್ತು.

* * * *

ಬೇಡ! ಮರಿ, ವೈದ್ಯನಾಗಬೇಡ! ಆದರ ಗೋಳು ನೀನು ಕಾಣೆ. ಕೇಳು ಮರಿ! ಪುಟ್ಟ ವೈದ್ಯನಾಗಿದ್ದಾಗ, ರೋಗಿಯೊಬ್ಬನ ಮನೆಗೆ ಹೋಗಿದ್ದೆ" ಎಂದು ಶುರು ಮಾಡಿದ ಮುತ್ತಜ್ಜ; ವೈದ್ಯ-"ಮಾಜಿ"ಯವರ ಗೋಳು ಗೊತ್ತಲ್ಲ! ಗತ ವೈಭವವನ್ನು ಹೇಳಿದ್ದೇ ಹೇಳೋದು!

ಹೇಳಿದ್ದನ್ನು ಮರಿಮಗ ಮರೆತಿದ್ದ "ಮುಜ್ಜಜ್ಜಿ! ಒಂದು ಕತೆ ಹೇಳು" ಎಂದಿತ್ತು.

* * * *

ಒಂದೂರಿನಲ್ಲಿ ಒಬ್ಬ ರಾಕ್ಷಸ ಇದ್ದ. ಓದಿ ಓದಿ, ಕಣ್ಣಿಗೆ ಮಣ್ಣು ಹಾಕಿಕೊಂಡು, ನಿದ್ರೆ ಮಾಡದೆ ಓದಿ ಓದಿ ಪ್ಯಾಸು ಮಾಡಿದ. ವೈದ್ಯ ಆದ. ಕಲಿತಿದ್ದನ್ನ ಕೈಗಾರಿಕೆ ಮಾಡಿದ. ನೀ ಮಾಡುಲ್ಲವೇ ಮರಿ! ಸಿಕ್ಕಿದ್ದ ಗಾರೆ ಚೂರನ್ನ ಬಾಯಲ್ಲಿ ಇಡುಲ್ಲವೇ, ಹಾಗೇನೇ ಅವನೂ ಕೈಯಲ್ಲಿ ಗಾರೆ ಅರೆದ.

ಒಂದು ದಿನ ರಾತ್ರಿ ಕೂತಿದ್ದ. ದೀಪ ಎಲ್ಲಾ ಆರಿಹೋಗಿತ್ತು. "ನಮ್ಮ"ನೇಲಿ ದೀಪ ಆಗಾಗ ಆರಿಹೋಗುಲ್ವೇ! ಹಾಗೇನೇ!

"ಅವತ್ತು ನೀನೂಟಮಾಡ್ತಿದ್ದಾಗ, ನಿನ್ನ ಹತ್ತಿರ ನಾನು ಕೂತುಕೊಂಡು ಹಪ್ಪಳ ತಿಂತಿದ್ದಾಗ, ನಿನ್ನ ಹಿಡಕೊಂಡಾಗ, ದೀಪ ಆರಿಹೋಯ್ತಲ್ಲಾ ಹಾಗೇನೇ?

ಹೌದು ಮರಿ! ಅಂಥಾ ರಾತ್ರಿ, ಯಾರೋ ಬಂದು, ವೈದ್ಯರೇ? ವೈದ್ಯರೇ? ಅಂತ ಕೆಟ್ಟದಾಗಿ ಕೂಗಿದರು. ಮರಿ! ರಾಕ್ಷಸನಿಗೋ ಊಟಮಾಡಿ ಹೊಟ್ಟೆ ಭಾರ

ವಾಗಿತ್ತು. ಬಿದ್ದುಕೊಂಡಿದ್ದರೂ ನಿದ್ದೆ ಬಂದಿರಲಿಲ್ಲ. ಕೂಗು ಕೇಳಿ ಬೇಗ ಎದ್ದು ಹೋದ. ವರಾಂಡದ ಬಾಗಿಲು ತೆಗೆದ.

ಹೊರಗೆ ಹೋದ. ಗೇಟಿನ ಹತ್ತಿರಕ್ಕೆ.

"ಯಾವ ಗೇಟು ಮುಜ್ಜಜ್ಜ! ವರಾಂಡಾ ಬಿಟ್ಟು ಬರಬೇಡ. ಗೇಟು ತೆಗೆದಿರುತ್ತೆ, ಹಸು ಬಂದಿರುತ್ತೆ, ಹಾಯುತ್ತೆ ಅಂತೀಯಲ್ಲ ಆ ಗೇಟೇ" ಎಂದಿತು, ಮರಿಮಗ.

"ಹ್ಞೂ, ಮರಿ! ವರಾಂಡಾ ಬಾಗಿಲ ತೆಗೆದು, ಹೋದಾಗ ಆ ರಾಕ್ಷಸನಿಗೆ, ಛೀಛೀ, ಬಂದು ಕಾಲಿಗೆ ತೊಡರಿಕೊಂಡಿತು."

"ಛೀ! ಛೀ! ಮೊನ್ನೆ ರಸ್ತೇಲಿ ಮೂರುಕ್ಕೆ ಬಂದಿತ್ತಲ್ಲಾ ಆ ಪೀಪೀನೇ?" ಎಂದು ತೊದಲಿತು ಮರಿಮಗು.

"ಅಲ್ಲಾ! ಮರಿ! ಛೀ! ಛೀ! ಅಂತ ಒಂದು ನಾಯಿ ಹೆಸರು. ಅದನ್ನ ಆ ರಾಕ್ಷಸ ಇಟ್ಟುಕೊಂಡಿದ್ದ. ಅದು ಅವನನ್ನ ಕಾವಲು ಕಾಯ್ತಾ ಇತ್ತು. ಅದು ಬಂದು ಕಾಲಿಗೆ ತೊಡರಿತು"

"ಆಮೇಲೆ? ಕಚ್ಚಿಬಿಡ್ತೇ?" ಎಂದಿತು ಮರಿ ಮಗು.

ಛೀ! ಛೀ! ಹೋಗು! ಮಲಕ್ಕೋ! ಎಂದ ರಾಕ್ಷಸ. ಛೀ! ಛೀ! ಹೋಗಿ ಮಲಗಿಕೊಂಡಿತು. ರಾಕ್ಷಸ ಗೇಟಿನ ಹತ್ತಿರ ಹೋದ.

* * * *

ಅಲ್ಲೊಬ್ಬ ನಿಂತಿದ್ದ. ವೈದ್ಯರೇ! ನನ್ನ ಹೆಂಡತೀಗೆ ಖಾಯಿಲೆ. ಅಸ್ಥಾವಸ್ಥೆ! ಬೇಗ ಬನ್ನಿ ಎಂದು ಹೇಳಿದ.

ರಾಕ್ಷಸ ಏನು ಮಾಡಿದ ಗೊತ್ತೆ? ಬೇಗ ಓಡಿಹೋಗಿ, ತನ್ನ ಗಾಡಿ ತಂದು, "ಎಲ್ಲಯ್ಯಾ, ನಿನ್ನ ಹೆಂಡತಿ? ಎಂದು ಅವನನ್ನ ಕೂರಿಸಿಗೊಂಡು ಓಡಿಸಿದ ಗಾಡೀನ.

ಅರ್ಧಗಂಟೆ ಓಡಿಸಿದ. ಛತ್ರ ಒಂದು ಸಿಕ್ಕಿತು.

"ನಿಲ್ಲಿಸು" ಎಂದ, ರೋಗಿಯ ಗಂಡ.

ಗಾಡಿ ನಿಲ್ಲಿಸಿದ ವೈದ್ಯ.

ರೋಗಿಯ ಗಂಡ ಇಳಿದ

" ನಿಮ್ಮ ಶುಲ್ಕ ಎಷ್ಟು? " ಎಂದ ರೋಗಿಯ ಗಂಡ.

" ಹತ್ತುರೂಪಾಯಿ? ಅದಿರಲಿ ರೋಗಿ ಎಲ್ಲಿ" ಎಂದ ರಾಕ್ಷಸ.

" ರೋಗಿ ಎಲ್ಲಿ ಬಂತು? ಮದುವೆಯೇ ಆಗಿಲ್ಲ ನನಗೆ, " ಬಯಲ" ನಾಟಕ ನೋಡುಕ್ಕೆ ಹೋಗಿದ್ದೆ, ಬೆಳಗಿನ ಝಾಮ ೨ ಗಂಟೆ ಬಡಿದಿತ್ತು. ಮನೆಗೆ ಹೋಗಲು ಯಾವ ಬಾಡಿಗೆ ಗಾಡೀನೂ ಸಿಗಲಿಲ್ಲ.

ನಿಮ್ಮ ಬೋರ್ಡ್ನ ನೋಡಿದೆ! ಬಾಡಿಗೆ ಕೊಟ್ರೆ ನೀವು ಬರ್‍ತೀರಿ ಅಂತ ಗೊತ್ತು! ಅದಕ್ಕೇ ನಿಮ್ಮನ್ನ ಕರೆದೆ. ತೊಗೊಳ್ಳಿ ಹತ್ತುರೂಪಾಯಿ! ಅಂತ ಹತ್ತು ರೂಪಾಯನ್ನ ರಾಕ್ಷಸನಿಗೆ ಕೊಟ್ಟ.

ರಾಕ್ಷಸ ಆ ರೂಪಾಯನ್ನ ತೊಗೊಂಡು ಒಂಟಿಯಾಗಿ ಮನೆಗೆ ಬಂದ. ವೈದ್ಯರ ಕೆಲಸ ಮಾಡಬೇಡ ಮರಿ! ಮೋಸ ಹೋಗ್ತೀ!

*   *   *   *

" ಮುಜ್ಜಜ್ಜ! ರಾಕ್ಷಸ ಬಂದಾಗ ಫೀಫೀ ಬೌ ಬೌ ಎನ್ನಲಿಲ್ವೇ?"

" ಹೌದು ಮರಿ! ರಾಕ್ಷಸ ಬೈಕೋತಾ ರಾತ್ರೀಲಿ ಬಂದಾಗ ಬೌ ಬೌ ಅಂತ ಫೀಫೀ ಗೇಟಿನ ಹತ್ತಿರ ಬೊಗಳಿತು.

ರಾಕ್ಷಸ ಬಂದು ಮಲಗಿಕೊಂಡ.

*   *   *   *

" ಮುಜ್ಜಜ್ಜ! ನಂಗೊಂದು ಫೀಫೀ ತಂದುಕೊಡಜ್ಜ. ಆಮೇಲೆ ನಾನೂ ವೈದ್ಯ ಆಗ್ತೀನಿ" ಎಂದು ಹೇಳಿತು ಮರಿಮಗು.

*   *   *   *

ನೆರಳಿನಿಂದ ಹಾರಿಹೋಗಲು, ಕೌರವನಿಗೂ ಆಗಲಿಲ್ಲ. ಮರಿಮಗನು ಮುತ್ತಜ್ಜನ ನೆರಳಿನಿಂದ ಅವನ ಜಾತಕದಿಂದ ಏರಿ ಹೋಗಲು ಆಗಬಹುದು ಎಂದು ಮುತ್ತಜ್ಜ, ಆಸೆಪಟ್ಟ, ಜೊಲ್ಲು ಸುರಿಸುತ್ತಾ.

ಗಾಣಿಗಿತ್ತಿ ಅಯ್ಯೋ ಅಂದಾಗ
—ಅವಳ ನೆತ್ತಿ ತಣ್ಣಗಾಯ್ತು!

*   *   *   *

ಮೇಡಮ್ಮನ ದೀಪಾವಳಿ

“ಇದೇನೇ ಹೀಗೆ ಮುಸಿ ಮುಸಿ ನಗ್ತಾ ಇದೀಯೆ?....ಮೆಲ್ಲಗೆ! ತುಪ್ಪದ ಬಟ್ಲನ್ನೇ ತಟ್ಟೆಗೆ ಬಗ್ಗಿಸೀಯೇ!....ಯಾಕೆ, ನಿನ್ನ ಮೊದಲ ದೀಪಾವಳೀ ನೆನಪಿಗೆ ಬಂತೇನು? ನಿಮ್ಮಪ್ಪ ತುಪ್ಪ ಬಡಿಸು ಅಂದ್ರೆ, ನನ್ನಲೆಗೆ ಎತ್ತಿ ಹಾಕಿದ್ಯಲ್ಲ!.... ಅದೇನೋ ನಿಮ್ಮಪ್ಪನ ಮನೆ ತುಪ್ಪ ಅನ್ನು....ಇದು....”

“ಅಯ್ಯೋ, ನನ್ನ ದೀಪಾವಳಿ ನೆನಸ್ಕೊಳ್ಳಿಲ್ಲಾಂದ್ರೆ, ಮಗ್ಗುಲ್ಮನೇ ಮೇಡಮ್ಮನ ದೀಪಾವಳಿ ನೆನಸ್ಕೊಂಡು ನಗು ಬರ್ತಿದೆ ಅಷ್ಟೆ.”

“ಯಾರು?....ಆ ಹಿಂದೀ ಮೇಡಮ್ಮೇ?....ಅವಳಿಗೆ ಮದುವೆ ಆಯ್ತಲ್ವೇ ಈಚೀಚೆಗೆ?”

“ಹುಂ, ಆಯ್ತಲ್ಲ ಮೂರ್ತಿಂಗಳಕೆಳಗೆ. ಪಾಪ, ಅವರಪ್ಪ ಅಮ್ಮನೂ ಹರಸಾಹಸ ಮಾಡಿದ್ದರು ಆ ‘ಹುಡುಗೀ’ ಕೊರಳಲ್ಲಿ ಕರೀಮಣೀ ಸರ ಕಂಡೇವೇ ಅಂತ. ಹದಿನೈದು ವರ್ಷಗಳ ಸತತಪ್ರಯತ್ನ ಕಣ್ರೀ ‘ಹುಡುಗ’ನ ಬೇಟೆಗೆ!.... ರಾಮಾಜೋಯ್ಸನಿಗೇ ಈವರೆಗೆ 15×5=75 ರೂಪಾಯಿ ಸಿಕ್ಕಿದೆ!”

“ಅವನಿಗ್ಯಾಕೇ ಅಪಾಟೇ ದುಡ್ಡು?”

“ಯಾಕೆ ಅಂದ್ರೆ, ವರ್ಷ ವರ್ಷವೂ ಹೊಸ ಜಾತಕ ಸಿದ್ಧ ಮಾಡಬೇಡವೆ! ಅವನೂ ಕಸುಬಿನಲ್ಲಿ ಕದೀಮನೇ ಅನ್ನಿ, ಹೊಗೇಗೂಡಿನ ಹತ್ತಿರ ಪೆಟ್ಟಿಗೇಲಿ ಅಪ್ಪ ಕಟ್ಟಿಟ್ಟಿದ್ದ ಮಂಕು ಬಣ್ಣದ ಕಾಗದ ತೆಗೆದು, ಮಸೀ ಕುಡಿಕೆಗೆ ನೀರು ಸುರಿದು, ಅದರಲ್ಲಿ ಬರೀತಿದ್ದ—ಇಲ್ಲದಿದ್ದರೆ ಆ ಜಾತಕಕ್ಕೆ ಹದಿನೆಂಟು ವರ್ಷ ವಯಸ್ಸಾಗೋದು ಹೇಗೆ?....ಅಂತೂ ಇಂತೂ ಅವಳ ವಯಸ್ಸು ಹದಿನೈದು ವರ್ಷದಿಂದ ಸ್ಥಾಯಿಯಾಗಿ—ಹದಿನೆಂಟಕ್ಕೇ ನಿಂತಿತ್ತು ನೋಡಿ!

“ಚೆನ್ನಾಗಿದೆ ಕಣೇ!”....ಹೋಗಲಿ, ಆಯ್ತಲ್ಲ ಅವಳಿಗೂನೂ ಮದುವೆ!”

"ಆಯ್ತೊನ್ನಿ, ಆದರೂ ಅವರೂ ಪಾಪ ಕೊಂಚದ ಕಷ್ಟಪಟ್ರೇ! ಅವಳ ಹಿಂದೆ ಇನ್ನಿಬ್ಬರು ಹುಡುಗೀರು ಬೆಳೆದು ನಿಂತಿದಾರೆ. ರಾಜೀನ—ಅದೇ ಮೇಡಂನ—ನೋಡಕ್ಕೆ ಬಂದ ಒಬ್ಬ ಗಂಡಿನ ತಾಯಿ 'ಹುಡುಗೀಗೆ ಹದಿನೆಂಟು ಅಂತೀರಿ! ಅಂದರೆ, ನಿಮ್ಮನೇಲಿ ಚಿಕ್ಕೋಳಿಂದ ಶುರು ಮಾಡಿ, ಆಮೇಲೆ ಮೇಲಿನ ಹುಡುಗೀರ ಮದುವೆ ಮಾಡೋ ಪದ್ಧತಿಯೇನೋ!' ಅಂತ ಮೂಗು ಹಾರಿಸಿ ಹೊರಟು ಹೋದರು. ಆಗಿನಿಂದ, 'ವಧುಪರೀಕ್ಷೆ' ಕಾಲದಲ್ಲಿ ಆ ಹುಡುಗೀರ್ನ ನೆರೆಮನೆ ಹೊರಮನೆಗೆ ಅಟ್ತಿದ್ದರು ಪಾಪ. ನಮ್ಮನೇಲೇ ಎಷ್ಟೋ ಸಲ ಬಂದು ಕೂತಿವೆ!

ಹಹಹಹ! ಬಿದ್ನಲ್ಲ ಕೊನೇಗೂ ಬಕರ ಯಾವನೋ ಬಲೇಗೆ!....ಚೆನ್ನಾಗಿದ್ದಾಗಿತ್ತು ಕಣೇ—ವರಪೂಜೆ ಮೆರವಣಿಗೇಲಿ ನೋಡಿದಾಗ!

"ಹುಂ, ಅವರಮ್ಮ ಸಾದಿನ ಬೊಟ್ಟಿಟ್ಟು ಐದೆಳೆಸರ ಹಾಕಿ ಕೂರಿಸಿದ್ದಳು ಪುಟ್ಟ ಮಗೂಗೆ!....ಇದಾನೆ, ರಾಜಿಗೆ ತಕ್ಕ ಹಾಗೆ!....ಹಿಹಿಹಿಹಿ!"

"ಇದೇನೇ, ಮತ್ತೆ ಶುರು ಮಾಡಿದೆ ನಗುಕ್ಕೆ?"

"ಪಾಪ, ಭೂಮಕ್ಕೆ ಹಾಕಿದಾಗ ಚಿರೋಟಿ ಕಡಿಯುಕ್ಕೆ ಹೋಗಿ ಅವನ ಹಲ್ಲೇ ಬಿತ್ಹೊಂದ್ರೆ!"

"ಮುರಿದ್ಹೋಯ್ತೇ"....ಅದೆಂಥಾ ಕಟುಕಲು ಚಿರೋಟಿ ಮಾಡಿದ್ರು ಹಾಗಾದರೆ?"

"ಮುರೀಲಿಲ್ಲ ಕಣ್ರೀ, ಕಟ್ಸಿದ ಹಲ್ಲು, ಕಳಚಿಬಂತು!"

"ಹಹಹಹ!....ಅದ್ಸರಿ, ಮೇಡಮ್ ಅಂದ್ಯಲ್ಲ....?

"ಹುಂ, ಮತ್ತೆ-ಇವಳ್ನ 'ಹುಡುಗಿ'ಯಾಗಿಟ್ಟಿರೋ ಖರ್ಚಾದರೂ ಅವಳೇ ಎಬ್ಬಿಸಿಕೊಳ್ಳಲಿ ಅಂತ ಹಿಂದೀ ಮೇಡಮ್ಮಾಗಿ ಸೇರಿಸಿದ್ದರು. ಮುಖದ ಹಳ್ಳಗಳಿಗೆ ಸಿಮೆಂಟು, ಸುಣ್ಣ—ನರೆತ ತಲೇಗೆ ಕರೀಬಣ್ಣ, ಬೇಡವೇ?"

"ಹಹಹಹ! ಈ ಮುವ್ವತ್ತರ ಗಡೀದಾಟಿ ಮೂರು ವರ್ಷ ಆಗಿರೋ ಮೇಡಂ ಮದುವಣಗಿತ್ತಿ ಗಂಡನಿಗೆ ದೀಪಾವಳೀ ಪುನಃ ಪೂಜೆ ಬೇರೆ ಮಾಡಿದರೆ ಅವಳಪ್ಪ ಅಮ್ಮ?"

"ಅವರೇನು ಮಾಡೋದು, ಅವನೇ ಮಾಡಿಸಿಕೊಂಡರೆ! ಮೇಲೆ ಸಿಕ್ಕಿದ್ದ ಉಸಿರು ಕೆಳಕ್ಕಿಳಿದಿತ್ತು ಅವರಿಗೆ ಪಾಪ-ಕನ್ಯಾದಾನ ಮಾಡಿ ಕೈತೊಳೆದುಕೊಂಡವಲ್ಲ, ಆಚೆಗೆ ಸಾಗಾಕ್ತಾಳಲ್ಲ, ಅಂತ. ಆ ಭೂಪ-ಬೀಗಮಹಾಶಯ-'ಇಲ್ಲೇ ಇರಲಿ

ಹುಡುಗಿ, ದೀಪಾವಳಿ ಆಗೋವರೆಗೆ'-ಅಂತ ಅರ್ಥವತ್ತಾಗಿ ಆಟಂಬಾಂಬು ಹಾರಿಸಿ, ಹಾರಿಸ್ಕೊಂಡು ಹೋಗೇಬಿಡೋದೇ ಮಗನ್ನ!"

"ಹಹಹಹ! ಮೇಡಂ ಮೇಡಮ್ಮಾಗೇ ಉಳಿದಿದ್ದಾಳೆ ಅನ್ನು ಹಾಗಾದರೆ ಅವಳು?"

"ಇನ್ನೇನು ಮಾಡ್ತಾಳೆ?....ಆ ಭಂಡ ಅಳಿಯನಿಗಾದರೂ ಸಂಕೋಚ ಬೇಡವೇಂದ್ರೇ? ರೈಲಲ್ಲಿ ಬರುವಾಗ, ಗಾಡೀಲಿ ಜೊತೇಲಿದ್ದೋರು, ಪ್ರಯಾಣದ ಕಾರಣ ಕೇಳಿದರಂತೆ. 'ಹಿಹಿಹಿಹಿ! ದೀಪಾವಳೀಗೆ!' ಅಂತ ಇವನು ಹಲ್ಲು ಕಿರಿದಾಗ, 'ಬೀಗರ ಮನೇಗೇನೋ! ಅಂದ್ಹಾಗೆ, ನಿಮ್ಮ ಮಗ ಹೊಸ ಮದುವಣಿಗ ಎಲ್ಲಿ?' ಅಂತ ಅವರು ಕೇಳಿದಾಗಲಾದರೂ ಅವನಿಗೆ ನಾಚಿಕೆ ಬೇಡವೇ?....ಅವನೇ ಹೇಳಿಕೊಂಡನಂತೆ ಅತ್ತೆಮ್ಮನೆದುರಿಗೆ!"

"ಅಂತೂ ಎಣ್ಣೆ ನೀರು, ಹಬ್ಬದೂಟ, ಆರತಿ ಅಕ್ಷತೆ, ಉಡುಗೆ ಕೊಡುಗೆ, ಮತಾಪು ಪಟಾಕಿ, ಎಲ್ಲ ಸಾಂಗೋಪಾಂಗವಾಗಿ ನಡೆಯಿತೂನ್ನು!"

"ಹುಂ. ಆರತಿ ಮಾಡಬೇಕು ಅಂತ ಅವರಜ್ಜಿ ಅರಳುಂಡೇನೂ ಕಟ್ಟಿದ್ದರು. ಆದರೆ ದಂಪತಿಗಳು ಪಟಾಕಿ ಹಚ್ಚಿದ್ದು ಮುಗೀಲೇ ಇಲ್ಲ, ಅಷ್ಟರಲ್ಲಿ ದೀಪ ಹೋಯ್ತು!"

"ಅಷ್ಟೊಂದು ಪಟಾಕಿ ತಂದಿದ್ದನೇನೇ ಅಳೀಮಯ್ಯ?"

"ಅವನ್ಯಾಕೆ ತರ್ತಾನೆ! ಅತ್ತೇಮನೆಯೋರು ತರ್ಸಿದಾರೆ ಅಂತ ಹಿಗ್ಗಿ ಹಚ್ಚಿದ್ದೂ ಹಚ್ಚಿದ್ದೆ, ಉರ್ಸಿದ್ದೂ ಉರ್ಸಿದ್ದೇ!"

"ಪರವಾಗಿಲ್ಲ, ಅವರು ಅಷ್ಟೊಂದು ತರ್ಸಿದ್ದು ಹೆಚ್ಚೇಕಣೇ ಪಾಪ!"

"ಹಹ! ಅವರ್ಯಾಕೆ ತರಿಸ್ತಾರದು! ಮೇಡಮ್ಮನ ಶಿಷ್ಯರ ಸಪ್ಲೈ ಅದೆಲ್ಲ. ಎಲ್ಲರೂ ಅಷ್ಟಷ್ಟು ತಂದು ಕೊಡದಿದ್ರೆ, ಪರೀಕ್ಷೇಲಿ ಹಿಂದೀಲಿ ಹಿಂದಕ್ಕೆ ಹಾಕಿ ಬಿಡ್ತೀನಿ ಅಂತ ಹೆದರ್ಸಿದ್ದಳಂತೆ ಹಿಂದಿನ ದಿನವೇ!"

"ಭೇಷ್, ಒಳ್ಳೇ ಯೋಜನೆ, ಮೇಡಮ್ಮಂದು....ಆದರೂ, ಆರತಿ ಹೊತ್ಗೆ ದೀಪ ಹೋದ್ದು ಅಪಶಕುನ ಕಣೇ!"

"ಹಾಗೇ ಅಂದ್ರು ಅಜ್ಜಿ. ಅದಕ್ಕೆ ಮೇಡಮ್ಮು, 'ದೀಪ ಹೋದರೇ ನನಗೆ ಶಕುನ ಅಜ್ಜಿ, ಅವತ್ತು ದೀಪಾ ಹೋದಾಗ ಮೋಂಬತ್ತಿ ಬೆಳಕಿನಲ್ಲೇ ಅವರು ನನ್ನ ಮೆಚ್ಚಿದ್ದು! ಈಗ ದೀಪ ಹೋಗಿದೆ–ಇನ್ನಾರು ತಿಂಗ್ಳಿಗೆ ತೊಟ್ಲುಕಟ್ಟಿ ಮನೇ ಬೆಳಕು ಮಾಡ್ತೀನಿ!' ಅಂದ್ಳು."

" ಹುಂ, ಸೊಗಸಾಗಿದೆ ಮೋಡಮ್ಮನ ದೀಪಾವಳಿ!....ಹೋಗಲಿ, ಅವಳಿಗೇನಾದರೂ ಉಡುಗೊರೆ ತಂದುಕೊಟ್ಟನೋ?"

" ಇಲ್ಲದೇ ಉಂಟೇ. ಹಬ್ಬದ್ದಿನ ಸಂಜೆ ಗಂಡ ಹೆಂಡ್ತಿ ಹೊರಗೆ ಹೋಗಿ ಬರುವಾಗ, ಸೀರೆಪೆಟ್ಟಿಗೆ ಹಿಡುಕೊಂಡೇ ಬಂದರು. ತಾವಿಷ್ಟು ಖರ್ಚುಮಾಡಿದ್ದಕ್ಕೆ ಇಷ್ಟಾದರೂ ಗಿಟ್ಟಿತಲ್ಲ ಅಂತ ಅವಳಮ್ಮ ಅಪ್ಪ ಹಿಗ್ಗಿದರು."

"....ಇದೇನೇ, ತಿರುಗಿ ಹೀಗೆ ನಗಕ್ಕೆ ಹತ್ತಿದೆ?"

" ಹಹಹಹ!....ಮೊನ್ನೆ ತಿಂಗಳ ಕೊನೇಲಿ, ಸೊಸೈಟಿ ಲೆಖ್ಖ ನೋಡಿದಾಗಲೇ ತಿಳಿದದ್ದು ಅವರಿಗೆ—ಅಳೀಮಯ್ಯ, ಮಾವನ ಲೆಖ್ಖದಲ್ಲಿ ಹೆಂಡತೀಗೆ ಸೀರೆ ತಂದಿರೋದು ಅಂತ!"

" ಹಹಹಹ!....ಹಹಹಹ!"

—ಟಿ. ಸುನಂದಮ್ಮ.

— ಚುನಾವಣಾ ಗೋಲೀ ಆಟ —

ಎಕ್ಕಲ್ ಕಾಜಾ———ಜಟ್ಟಿ ಒಪ್ಪಿದ.

ಡಬ್ಬೈ ರಾಜಾ————ಎರಡರಲ್ಲೊಂದು.

ತೀನ್ನೈ ತೀರ್ಪು———ದಿಳ್ಳಿ ತೀರ್ಪು

ಚಾರ್ಬೈ ಚೆಂಡು———ಕೇರೀಲಿ ದಂಡು.

ಪಂಚಾಂ ಪಂಡು———ಸಾವಿರ! ಚೌರ.

ಛೇ ರಂಗೇರಿ————ಸೇಂದೀಗೆ ಬಿಂದಿಗೆ.

ಸಾತಲ್ ಘಾಟಿ———ರಸ್ತೇಲಿ ಅಬ್ಬರ.

ಆಠಲ್ ಮೀಟಲ್—ಪುಢಾರಿ ನೂರು.

ನವ್ವಾಂಗೇವ————ರಂಗು ರೇಗು.

ದಸ್ಕರ್ ಖೇಲಿ———ಹೋಯ್ತು ಹತ್ತು!

ಏಕ್ ಪಟೇಲ———ಒಬ್ಬ ಗೆದ್ದ!

ಧುಂ ಧಢೇಲ————ಶೇವಣಿ ಬೋಲಬೋಲಬೋಲ.

ಮಕ್ಕಳಿಬ್ಬರು ಕಾನ್‌ವೆಂಟ್ ಹತ್ತಿರ ಮಾತಾಡಿಕೋತಾ ಇದ್ದರು.

ತಮಿಳಿನ ಒಬ್ಬಳು ಜಂಭದಿಂದ "ನಮ್ಮಪ್ಪ 'ಭದ್ರಾ ಶ್ರೀ'" ಎಂದಳು.

ಮಲಯಾಳದ ಇನ್ನೊಬ್ಬಳು ಅಷ್ಟೇ ವಿನಯದಿಂ "ಬಿಡೇ! ನಮ್ಮಪ್ಪ ಅಡ್ವಕೇಡಿ" ಎಂದಳು.

—ತಮಿಳು ಹುಡುಗಿ ತಂದೆ ಚುನಾವಣೆಗೆ ೧ ಲಕ್ಷ ಕೊಟ್ಟಿದ್ದ.


—ಮಲಯಾಳದ ಹುಡುಗಿ ತಂದೆ ಅಡ್ವೊಕೇಟು ಆಗಿದ್ದ.

* * * *

ಅಂಗೈ ಹುಣ್ಣಿಗೆ ಕನ್ನಡಿ ಬೇಕೇ ಎನ್ನುತ್ತಿದ್ದರು ಮೊದಲು-ಮೊದಲು.

—ಈಗ ಅಂಗೈಲಿ ಹುಣ್ಣಿದೆ ಅಂತ ಕಾಣಬೇಕಾದರೆ, ನಮ್ಮ ನಾಯಕರುಗಳಿಗೆ ಕನ್ನಡಿ ಬೇಕೇ ಬೇಕು!

—o—



"ಹಾಳಾದ್ ಹುಡುಗ್ರು ಇಲ್ಲೇ ಬ್ಯಾಸ್ಕೆಟ್ ಆಟ ಶುರುಮಾಡಿವೆ"

ನಡು ಹಗಲಿನ ಚೀತ್ಕಾರ

ಮಾಗಿಯ ಹಗಲು ಪ್ರಖರವಾಗಿತ್ತು. ಸಂತೆಯ ದಿವಸದ ಧಾಂದಲೆ ಜೋರಾಗಿತ್ತು. ಮೂಡಗಾಳಿಗೆ ಮುಖಗಳು ಒಡೆದು ತರಚುಗಟ್ಟಿದ್ದವು. ಸೂಡರಿನ ಥಂಡಿ ಮನಸ್ಸಿಗಂಟಿತ್ತು.

ರಸ್ತೆಯಲ್ಲಿ ನಾಲ್ಕೆಂಟು ಕಾಲೇಜು ಹುಡುಗರು ಸೈಕಲ್ ಹತ್ತಿ ಹೊರಟಿದ್ದರು. ಅವರ ಮುಂದೆ ಎರಡೆರಡು ಬಂಡಿಗಳ ಸಾಲು ದಾರಿಯನ್ನಡ್ಡಗಟ್ಟಿದ್ದವು. ದೂರದಲ್ಲಿ ಲಾರಿಗಳ ಗುಟುರು ಕೇಳುತ್ತಿತ್ತು. ಪಾದಚಾರಿಗಳು ಅಂಗಡಿಕಟ್ಟೆಯಲ್ಲಿ ನಿಸ್ಸಹಾಯಕರಾಗಿ ನಿಂತು ಮೆರವಣಿಗೆಯ ಪ್ರಗತಿಯನ್ನು ವೀಕ್ಷಿಸುತ್ತಿದ್ದರು. ಸೈಕಲ್ಲುಗಳು ಮುಂದಾದಂತೆ ಜನರ ತಂಡ ರಸ್ತೆಗಿಳಿಯಲಾರಂಭಿಸಿತು. ಅಷ್ಟರಲ್ಲಿ ದೂರದಿಂದ ಯಾವುದೋ ಬೀಡಿ ಪ್ರಚಾರದ ರಿಕಾರ್ಡ್ ಆರಂಭವಾಯಿತು. ಇನ್ನಾವನೋ ಒಬ್ಬ 'ಧೂತ್‌ಪೇಡಾ, ಥೂದ್ಪೇಡಾ' ಎನ್ನಲಾರಂಭಿಸಿದ. ಮನೆಗಳ ಬಾಗಿಲು ತೆರೆದು ಜನ ಹೊಸ್ತಿಲು ದಾಟಿದರು. ಯಾವುದೋ ಒಂದು ಘಟನೆ ನಡೆಯಲಿದೆ, ಎಂಬ ಭಾವನೆ ಜನಗಳಲ್ಲಿ ಬೆಳೆಯಿತು. ಅವರ ಎಣಿಸಿಕೆ ಸುಳ್ಳಾಗಲಿಲ್ಲ.

ಹಿಂದಿನಿಂದ ತೀವ್ರವೇಗದ ಜಟ್ಕಾ ಒಂದು ಬಂತು. ದಾರಿಯ ಜನಗಳನ್ನು ಸೀಳಿ ಇಬ್ಭಾಗಿಸಿ, ಸೈಕಲ್ಲುಗಳ ವ್ಯೂಹವನ್ನು ಭೇದಿಸಿ ಗಾಡಿಗಳ ಸುಳಿಯ ನಡುವೆ ಸಿಲುಕಿತು.

'ಅಪ್ಪಣ್ಣೀ'

'ಅಪ್ಪಣ್ಣೀ'

'ಅಯ್ಯಯ್ಯೋ....'

'ಹೋ ಹೋೀೀೀ'

'ಲಬಬಬಬಬ'

ಎಂಬ ಚೀತ್ಕಾರ ಜಟ್ಕಾದೊಳಗಿನ ಒಬ್ಬ ನವತರುಣಿಯ ಬಾಯಿಂದ ಬರುತ್ತಿತ್ತು, ಬಾಗಿಲು ದಾಟಿದ ಜನ ರಸ್ತೆಗಿಳಿದರು. ಜಟ್ಕಾ, ಗಾಡಿಗಳ ಸಾಲಿನೊಳಗೆ ಸಿಲುಕಿ ಮಂದಗತಿಯಾಯ್ತು ಸೈಕಲ್ ತರುಣರು ಗಾಡಿಯೊಳಗೆ ನೋಡಿದರು.

'ಶಹಭಾಸ್' ಎಂದು ಕೂಗಿದರು.

‘ ಸಾನ್ಸರಲ್ಲೋ ’

‘ ಅಲ್ಲೇ ಇರ್ತಿನೋ ’

‘ ನನ್ನರಕೊಂಡು ಹೋಗಬ್ಯಾಡೋ ’

‘ ಬಿಡೋ ’

‘ ಯುವಣೀ! ಹೋ‌ಽಽಽ ’

ಎಂದು ಮುಂತಾಗಿ ಏರುದನಿಯಲ್ಲಿ ತರುಣಿ ಚೀರಿದಳು. ರಸ್ತೆಯಲ್ಲಿ ಜನ ಸಂದಣಿ ದಟ್ಟವಾಯ್ತು. ಹುಡುಗರು ‘ ಜೈ ’ ಎಂದರು. ಆ ತರುಣಿಯನ್ನು ಬಲ ವಾಗಿ ಹಿಡಿದುಕೊಂಡಿದ್ದ ಒಬ್ಬ ಯುವಕ ನಗುತ್ತಾ ಅವಳ ಕೂಗಿನ ಪರಿಣಾಮ ವನ್ನು ನೋಡುತ್ತಿದ್ದ. ಅವಳ ಚೀತ್ಕಾರ ಹೆಚ್ಚಿತು. ಮೆರವಣಿಗೆಗೆ ರಂಗೇರಿತು. ಕತ್ತೆಗಳ ಗುಂಪೊಂದು ರಸ್ತೆಗೆ ನುಗ್ಗಿತು. ಡೀಸೆಲ್ ಲಾರಿಗಳೆರಡು ಈ ಮೆರವಣಿಗೆಗೆ ಇದಿರು ದಿಕ್ಕಿನಲ್ಲಿ ಬಂದವು. ಟ್ರಾಫಿಕ್ ಜಾಂ ಆಯ್ತು. ಸೆಕೆಂಡಿಗೆ ಹತ್ತು ಜನ ಈ ಗುಜುಗುಂಪಲಿಗೆ ಸೇರಿದರು. ಏರುದನಿಯಲ್ಲಿ ವಾಗ್ವಾದಗಳಾರಂಭವಾದವು. ತರುಣಿ ಚೀರುತ್ತಲೇ ಇದ್ದಳು. ಅವಳನ್ನು ಹಿಡಿದು ಕುಳಿತ ಯುವಕ ನಗುತ್ತಲೇ ಇದ್ದ.

ಅಂತೂ ಕೊನೆಗೊಮ್ಮೆ ಪೋಲೀಸಿನವನು ಬಂದ. ಜಟ್ಕಾದ ಬಳಿಗೆ ಹೋದ. ‘ ಇದೇನೋ ಈ ಅವಸ್ಥೆ ? ’ ಎಂದ. ಜಟ್ಕಾದ ಯುವಕ ‘ ನನ್ನ ಹೆಂಡತಿಯನ್ನು ನಾನು ಕರೆದುಕೊಂಡು ಹೋದರೆ, ನಿಂದೇನೋ ಪುಂಗಿ ? ’ ಎಂದ. ಗುಂಪಿನೊಳಗಿ ನಿಂದ ಕಾಂಗ್ರೆಸ್ ಕಪ್ಪಣ್ಣನವರು ಅಲ್ಲಿಗೆ ಧಾವಿಸಿ ‘ ಹಾದು. ಪ್ರಗತಿಗಾಗಿ ಎಷ್ಟೇ ಗೊಂದಲವೆದ್ದರೂ ಸಹಿಸಬೇಕು. ದೇಶ ಮುಂದುವರಿಯಲು ಒಪ್ಪದಿದ್ದರೆ ಅದಕ್ಕೆ ಮಾರ್ಗದರ್ಶನ ಮಾಡಲೇಬೇಕು. ನನ್ನ ಸಂಸ್ಥೆಯ ಬೆಂಬಲ ಯುವಕನಿಗಿದೆ ’ ಎಂದರು.

ಅಲ್ಲಿಯೇ ಇದ್ದ ಅಯ್ಯನವರು “ ಈ ಯುವಕನ ನಿಲುವನ್ನು ಸ್ವತಂತ್ರ ಪಕ್ಷ ಖಂಡಿಸುತ್ತಿದೆ. ಇದು ಪ್ರಜಾಪ್ರಭುತ್ವಕ್ಕೂ, ವೈಯಕ್ತಿಕ ಸ್ವಾತಂತ್ರ್ಯಕ್ಕೂ ವಿರುದ್ಧ ವಾದುದು. ಆದುದರಿಂದ ಕಾಂಗ್ರೆಸ್ಸಿಗೆ ಓಟು ಕೊಡಬೇಡಿ. ಮತ್ತು ಈ ತರುಣಿಯ ಬಿಡುಗಡೆ ಕೂಡಲೇ ಆಗಬೇಕು ” ಎಂದರು.


ಕಮ್ಯೂನಿಸ್ಟ್ ಕರಿಯಣ್ಣ ಕೆಂಪುಬಾವುಟವನ್ನು ಹಿಡಿದು ವಾದರಂಗಕ್ಕಿಳಿದ. “ ಇವೆರಡು ಮತಗಳೂ ಪ್ರತಿಗಾಮಿಯಾಗಿವೆ. ಈ ಯುವಕನಲ್ಲಿ ಈ ಯುವತಿಗೆ ವಿಶ್ವಾಸವಿಲ್ಲ. ಏಕೆಂದರೆ ಇವನು ಬೂರ್ಜ್ವಾ, ಕ್ರಾಂತಿವಿರೋಧಿ, ಸ್ಟಾಲಿನ್ ಪಕ್ಷಪಾತಿ ಮತ್ತು ಕಾಂಗ್ರೆಸ್ ಸದಸ್ಯ. ಈ ಯುವತಿ ಜನತೆಯ ಪ್ರತಿನಿಧಿ. ಇವಳಿಗೇನು ಬೇಕೆಂದು ಗೊತ್ತಿಲ್ಲ. ಆದುದರಿಂದ ನಮ್ಮ ಪಕ್ಷಕ್ಕೇ ಓಟು ಕೊಡಿ ” ಎಂದು ಕೂಗಿದ.

ಪಿ.ಎಸ್.ಪಿ. ಪುಟ್ಟಣ್ಣ 'ದೇಶದ್ರೋಹಿ ಕರಿಯಣ್ಣನಿಗೂ ಕಮ್ಯೂನಿಸ್ಟ್ ಪಾರ್ಟಿಗೂ ಧಿಕ್ಕಾರ. ಚೌ ಎನ್ ಲೈ ಬಾಯಿಬಡುಕರನ್ನು ಧ್ವಂಸ ಮಾಡಿರಿ. ನಮ್ಮ ಪಕ್ಷಕ್ಕೇ ಓಟು!' ಎಂದ.

ಜನಸಮೂಹ ಭಯಂಕರ ಕರತಾಡನ ನಡೆಸುತ್ತಲೇ ಇತ್ತು. ಆಗ ಸರ್ವೋದಯ ಕಾರ್ಯಕರ್ತರು ಅಶ್ಲೀಲ ಸಿನಿಮಾ ಪೋಸ್ಟರುಗಳನ್ನು ಹರಿದುಹಾಕಿ, ಮಿದುಳುದಾನ ನಡೆಸುವುದೇ ಈಗಿನ ಈ ಕ್ಷುಬ್ಧ ವಾತಾವರಣಕ್ಕೆ ಪರಿಹಾರ. ಎಲ್ಲರೂ ಶಾಂತಿಸೇನೆಗೆ ಸೇರಿ ಎಂದು ಹಸ್ತಪತ್ರಿಕೆಗಳನ್ನು ಹಂಚಿದರು. ಅಷ್ಟರೊಳಗೆ ರಸ್ತೆ ಖಾಲಿಯಾಗುತ್ತಾ ಬಂತು.

ಚುನಾವಣೆಯ ಮೊದಲ ಗಾಳಿ ಮುಗಿಲುಹಳ್ಳಿಗೆ ಹೀಗೆ ಬೀಸಿತು.

—ಅ. ರಾ. ಸೇ.



ಮಾಸ್ತರು:—ಯಾಕೋ ಕಿಟ್ಟು-ಸೊನ್ನೆ ರನ್ನಂತೆ-ಬೌಲಿಂಗ್ ಬಿರುಸಾಗಿತ್ತೇನೋ?

ಕಿಟ್ಟು:—ಮ್ಯಾಚಿಗೆ ಹೊರಡೋವಾಗ ನಿಮ್ಮ ತಾಯಿ ಎದುರಿಗೆ ಬರದೆ ಇದ್ದಿದ್ದರೆ —ಕಡೇಪಕ್ಷ ನೂರು-ನೂರು ರನ್ನು ಹೊಡೆದುಬಿಡ್ತಿದ್ದೆ!

ಎಲ್ಲೆಲ್ಲೊ ತಿಂದರೆ ಎಲ್ಲೆಲ್ಲೊ ತೂಕ ಹೆಚ್ಚುತ್ತೆ

ರಂಧೋಲ್ ರಂಗಣ್ಣನನ್ನ ಚೌಲಕ್ಕೆ ಅಂತ ನಂಜನಗೂಡಿಗೆ ತಂದೆ ತಾಯಿಗಳು ಕರೆದುಕೊಂಡು ಹೋದರು. ಹರಕೆ ಒಪ್ಪಿಸುಕ್ಕೆ ಅಂತ ಬೆಲ್ಲದಲ್ಲಿ ತುಲಾಭಾರ ತೂಗಿಸಿದರು. ಎಂಟು ವರ್ಷದ ಹುಡುಗ ಮೂರು ಮಣ ತೂಗಿದ. ಶಿವಕೂಟಕ್ಕೆ ಬೆಲ್ಲವನ್ನೆಲ್ಲ ಹಾಕಿದಾಗ ಪಾರುಪತ್ಯೇಗಾರರು "ಸ್ವಾಮಿ! ಹರಸಿಕೊಳ್ಳುತ್ತಾ ಇರಿ. ಇವನಿಗೂ ಶ್ರೇಯಸ್ಸು. ಯಾವುತ್ತಾದರೂ ವರ್ಷಕ್ಕೆ ಬೇಕಾದ ಬೆಲ್ಲವೆಲ್ಲ ಶಿವಕೂಟಕ್ಕೆ ಸಿಗಬಹುದು" ಎಂದು ಬಿನ್ನವಿಸಿಕೊಂಡರು.

ಜಮೀನ್ದಾರರ ಒಬ್ಬನೇ ಮಗ. ಹದಿನಾರಕ್ಕೆ ಇನ್ನೊಬ್ಬ ಜಮೀನ್ದಾರರ ಒಬ್ಬಳೇ ಮಗಳು ಧೋಂಡೂಬಾಯಿಯನ್ನು ಮದುವೆಯಾದ. ಹಳ್ಳದ ನೀರೆಲ್ಲ ಕೊಳಕ್ಕೆ ಸೇರಿದ ಹಾಗಾಯ್ತು. ಹಣ ತುಂಬಿದ ಮನೆ. ಧೋಂಡೂಬಾಯಿ ಮುಂದೋ, ರಂಗಣ್ಣ ಮುಂದೋ ಹೇಳುಕ್ಕೆ ಬರ್‍ತಿಲ್ಲ—ಹೊರವಾಗಿ ಬೆಳೆಯೋದರಲ್ಲಿ.

ಒಂದೇ ವ್ಯತ್ಯಾಸ! ಧೋಂಡೂಬಾಯಿಗೆ ಕೆಂಡರೊಟ್ಟಿ ಅಂದರೆ ಬಲು ಇಷ್ಟ. ಈಗಿನ ಕಾಲದವರಿಗೆ ಕೆಂಡರೊಟ್ಟಿ ಎಂದರೆ ತಿಳಿಯದೇ ಇರಬಹುದು. ಬಲು ಸುಲಭ ಇದನ್ನು ಮಾಡೋದು. ರುಚಿ ಅನಕ ಬಲು ಮೋಜು. ಒಣಗಿದ ಬಿಡಿ ಎಲೆ, ಅಂದರೆ ಮುತ್ತುಗದ ಒಣಗಿದ ಎಲೆ ತೊಗೊಳ್ಳೋದು. ಒಂದು ಹಿಡಿ ಅಕ್ಕಿ ಹಿಟ್ಟು, ಒಂದು ಚಿಟಿಕಿ ಉಪ್ಪು, ಚಮಚ ಜೀರಿಗೆಕಾಳು, ಎಲ್ಲವನ್ನೂ ನೀರಿನಲ್ಲಿ ಹದವಾಗಿ ಕಲಸೋದು. ಕಲಸಿದ ಹಿಟ್ಟನ್ನು ಒಂದು ಬಿಡಿಯೆಲೆ ಮೇಲೆ ಸ್ವಲ್ಪ ದಪ್ಪನಾಗೇ ತಟ್ಟೋದು. ಇನ್ನೊಂದು ಬಿಡಿಯೆಲೆ ಅದರ ಮೇಲೆ ಮುಚ್ಚೋದು. ಬಿಡಿಯೆಲೆ ತಕ್ಕಮಟ್ಟಿಗೆ ಕಚ್ಚಿಕೊಂಡಾಗ, ಒಲೇಗೆ ನೇರವಾಗಿ ಹಾಕೋದು—ಬೆಂಕಿ ಮೇಲೇನೆ— ಬಿಡಿಯೆಲೆ ಸುಡತು ಅಂದಾಗ —ಮೂರು ನಾಲ್ಕು ನಿಮಿಷದಲ್ಲಿ ಬೆಂದಿರುತ್ತೆ— ಹೊರಕ್ಕೆ ಎಳೆಕೊಳ್ಳೋದು. ಮಗುಚುಕ್ಕೆ ಹಿಡಿಯಿಂದ ರೊಟ್ಟಿಯ ಎರಡೂ ಕಡೆ ಚೆನ್ನಾಗಿ ಹೆರೆಯೋದು. ಈಕಡೆ ಆಕಡೆ ಧಂಡಿಯಾಗಿ ಬೆಣ್ಣೆಹಚ್ಚಿ, ಹಗೂರಾಗಿ ನಿಂಬೇಕಾಯಿ ಉಪ್ಪಿನಕಾಯಿರಸ ಹಚ್ಚಿ, ಕಚ್ಚಿ ಕಚ್ಚಿ ತಿಂದರೆ, ಸ್ವರ್ಗ ಸುಖ. ಎರಡು ಗಂಟೆಗೆ ಒಂದು ಸಾರಿ ಮಾಡಿಕೊಂಡು ತಿನ್ನಬಹುದು, ಐದೇ ನಿಮಿಷದಲ್ಲಿ.

ಹೀಗೆ ತಿಂದೂ ತಿಂದೂ ಧೋಂಡೂಬಾಯಿ ಕೆಂಡರೊಟ್ಟಿ ಆದಹಾಗೆ ಕರಕಲು ಕಳೆ ಕಾಣಿಸ್ತಾ ಇತ್ತು ಮುಖದ ಮೇಲೆಲ್ಲಾ.

ಆದರೂ ರಂಢೋಲ್ ರಂಗಣ್ಣನಿಗೆ ಮನೆ ತಿಂಡಿ ಅಂದರೆ ಅಷ್ಟಷ್ಟೇ! ಊರಿನ ಹೋಟೆಲುಗಳಲ್ಲಿ ಯಾವ ಯಾವ ದಿನ ಯಾವ ಯಾವ ತಿಂಡಿ ಮಾಡ್ತಾರೆ? ಎಲ್ಲಿ ಬಲು ರುಚಿಯಾಗಿರುತ್ತೆ, ಎಲ್ಲಾ ತಪಶೀಲು ಗೊತ್ತು. ವೆಂಕೋಬನ ಹೋಟಲಿನಲ್ಲಿ ಭಾನುವಾರ ಬೆಳಗ್ಗೆ ಮಸಾಲುದೋಸೆ, ಮಂಗಳವಾರ ಸಂಜೆ ಮುತ್ತ್ಯಾಲಸೆಟ್ಟಿ ಹೋಟಲಲ್ಲಿ ಮೈಸೂರುಪಾಕು, ರಾಮರೆಡ್ಡಿ ಮಿಲ್ಕ್ ಬಾರ್‌ನಲ್ಲಿ ಚೌಚೌ, ಇಸ್ಮೇಮಿಯಾ ಖಾನಾವಳಿಯಲ್ಲಿ ಸಮೋಸಾ, ಮೂರು ಕಳಾವರ್ ರೆಸ್ಟೊರಾಂಟಲ್ಲಿ ಸೌತೆಕಾಯಿ ಸಾಂಡ್‌ವಿಚ್, ಹೀಗೆ ಸಕಲ ಹೋಟಲುಗಳ ಸೌಭಾಗ್ಯವೂ ತಿಳಿದಿತ್ತು.

ಜಾತಿ ಮತ ಭೇದವಿಲ್ಲದೆ, ಪ್ರಾಮಾಣಿಕ ಸಾರ್ವಜನಿಕ ಭಾರತೀಯನಂತೆ ಎಲ್ಲೆಲ್ಲೂ ಹೋಗಿ, ರುಚಿಯಾದುದನ್ನೇ ತಿಂದು ಹೊರವಾಗಿ ಬೆಳೆಯುತ್ತಿದ್ದ.

ಒಂದು ದಿನ ಕೆಂಡರೊಟ್ಟೀಗೆ ಹಚ್ಚಿದ ಬೆಣ್ಣೆ ಬಲು ಘುಮಘುಮ ಅಂತಿತ್ತು. ಹತ್ತೇ ನಿಮಿಷದಲ್ಲಿ ಧೋಂಡೂಬಾಯಿ ಎರಡು ಸಾರಿ ರೊಟ್ಟಿ ಮಾಡಿ ತಿಂದಿದ್ದಳು. ಆಗ ಬೆಣ್ಣೆ ಮುಚ್ಚ್ಯೋರೇನ ಐಯ್ಯಂಗಾರ ಹೋಟಲಿನಲ್ಲಿ ಕಂಠಪೂರ್ತಿ, ಅಲ್ಲ, ಹಲ್ಲಿನತನಕ ತಿಂದಿದ್ದ ರಂಗಣ್ಣ ಬಂದ. ಬಂದು ದೊಡ್ಡ ಕುರ್ಚೀಲಿ ಬಿದ್ದುಕೊಂಡ. ಮಾತಾಡಲೂ ಉಸಿರಿತ್ತಿಲ್ಲ ಅವನಿಗೆ.

ಗಂಡ ಹೀಗಿದಾನಲ್ಲ ಅಂತ ಧೋಂಡೂಬಾಯಿಗೆ ದುಃಖ ಆಯಿತು. ಮನೇಲಿ ಸುಖವಾಗಿ ತಿನ್ನಬಾರದೇ. ಮೈಗೂ ಒಳ್ಳೇದು ಅನ್ನಿಸ್ತು. ಅದಕ್ಕೆ ಹೇಳಿದಳು: "ಏನೂ ಅಂದ್ರೆ, ಎಲ್ಲೆಲ್ಲೊ ಕಂಡಕಂಡ ಕಡೆ ಹೋಗಿ ಸಿಕ್ಕಿದ್ದನ್ನೆಲ್ಲಾ ತಿಂತೀರಿ. ಮೈಗೆ ಒಳ್ಳೇದಲ್ಲ. ಏನೇನು ಸಾಮಾನು ಹಾಕ್ತಾರೋ ಯಾರು ಬಲ್ಲರು? ಕೊಳೆತಿದ್ದು, ಹಳಸಿದ್ದು ಹಾಕಿ, ಮಸಾಲೆ ಹಚ್ಚಿ ರುಚಿ ತೋರಿಸ್ತಾರೆ. ಎಲ್ಲೆಲ್ಲೋ ತಿಂದು ಬರ್ತೀರಿ. ಯೇನೆಲ್ಲ ಖಾಯಿಲೆಗಳು ಎಲ್ಲೆಲ್ಲಿ ಬರುತ್ತೋ" ಎಂದು ಹೇಳಿದಳು.

ರಂಗಣ್ಣನಿಗೂ ಏದುಬ್ಬಸ ಹೆಚ್ಚಾಗಿತ್ತು. ಕೂತ ಕಡೇನೇ ಸೊಂಟ ಹಿಡಿದುಕೊಂಡಿತ್ತು. ನಿರ್ಧಾರ ಮಾಡಿದ. ಇನ್ನುಮೇಲೆ ಕಂಡಾಪಟ್ಟೆ ಹೋಟಲಿಗೆ ಹೋಗುಲ್ಲ ಅಂತ.

ಒಂದು ವಾರ ಹೊರಗೆ ತಿನ್ನುಕ್ಕೆ ಹೋಗಲೇ ಇಲ್ಲ.

ಎಲ್ಲಾ ಹೋಟಲಿನವರೂ ರಂಗಣ್ಣನ ಮನೆಗೆ ಬಂದರು. "ನೀವು ಬರದೇ ಇರೋದರಿಂದ ಬಿಕೋ ಅಂತ ಇದೆ ಹೋಟಲು. ಯಾಕೆ ಸ್ವಾಮಿ? ಇಷ್ಟು ಕೋಪ! ನಮ್ಮ ಅಪರಾಧ ಏನಾದರೂ ಇದೆಯೇ?" ಎಂದು ಬಿನ್ನವಿಸಿಕೊಂಡರು.

" ನಿಮ್ಮ ಮೇಲೆ ಯಾಕಪ್ಪ, ಕೋಪ! ಆದರೆ ನೋಡಿ, ಈಚೀಚೆಗೆ ಮೈತೂಕ ಹೆಚ್ಚಾಗ್ತಾ ಇದೆ. ಎಲ್ಲೆಲ್ಲೊ ತಿಂದರೆ ಎಲ್ಲೆಲ್ಲೊ ತೂಕ ಹೆಚ್ಚಾಗುತ್ತೆ. ಭಾರ ಸರಿಮಾಡಿಕೊಂಡು ನಡೆಯೋದು ಕಷ್ಟವಾಗಿದೆ. ಅಷ್ಟೇ ಕಾರಣ, ನೀವೇನೂ ತಿಳಕೋಬೇಡಿ " ಎಂದರು ರಂಗಣ್ಣ.

ಸಮಾಧಾನದಿಂದ ಹೋಟಲಿನವರೆಲ್ಲ ಹಿಂತಿರುಗಿದರು.

*　　*　　*　　*

ಇಲ್ಲಿಗೆ ಮುಗಿಯಿತು ಅಂತೀರಾ? ಹೋಟಲ ರುಚಿ ನಾಲಿಗೇಗೆ ಹತ್ತಿದರೆ ಇಷ್ಟು ಬೇಗ ಮುಗಿಯುತ್ತ್ಯೆ? ರಂಗಣ್ಣನಿಗೆ ಹೆದರಿಕೆ ಆಗಿ ಹೋಟಲು ಬಿಟ್ಟ.

ಆದರೆ ಮನೇಲಿ ಸುಟ್ಟ ಕೆಂಡರೊಟ್ಟೀನೆಲ್ಲ, ಒಲೆಯಿಂದ ಬಂದಬಂದ ಹಾಗೆ ರಂಗಣ್ಣ ಮುಕ್ಕುಕ್ಕೆ ಶುರುಮಾಡಿದ. ಧೋಂಡೂಬಾಯಿ, ಬಾಯಿಗೆ ಬೀಗಹಾಕೋ ಹಾಗೆ ಆಯಿತು. ಒಂದು ಗಂಟೇಲಿ ಹತ್ತು ಸರ್ತಿ ಕೆಂಡರೊಟ್ಟಿ ಸುಟ್ಟರೂ ಅವಳಿಗೆ ಒಂದು ಕೆಂಡರೊಟ್ಟಿಯೂ ಉಳಿಯುತ್ತಿತ್ತಿಲ್ಲ. ಹಾಗಾಗಿ ಅವಳು ಹೋಟಲಿನಿಂದ ಕಸ ಮುಸಿರೆಯೋಳ ಕೈಲಿ ತಿಂಡಿ ತರಿಸುಕ್ಕೆ ಶುರುಮಾಡಿದಳು. ಬೇರೆ ಬೇರೆ ಹೋಟಲಿನ ತಪಶೀಲನ್ನು ಆರೇ ವಾರದಲ್ಲಿ ಪಡೆದಿದ್ದಳು. ಗಂಡನ ತಲೆಯಲ್ಲೂ ಸ್ವಲ್ಪ ಮೆದುಳಿದೆ ಅನ್ನೋ ಸ್ಥಿತೀಗೆ ಬಂದಿದ್ದಳು. ಹೋಟಲ ರುಚಿ ಗಂಡನಿಂದ ಹೆಂಡತೀಗೆ ವರ್ಗ ಆಯಿತು. ಅಷ್ಟೆ! ಅನ್ಯೋನ್ಯ ದಂಪತಿಗಳು ಎರಡು ದೇಹ, ಒಂದು ಜೀವ.

*　　*　　*　　*

ಈಗೇನಾಯ್ತು ಗೊತ್ತೆ? ಬಚ್ಚಲಮನೆ ಒಲೆತನಕ, ರಂಗಣ್ಣ ಉಗ್ರಾಣದಿಂದ ನಡೆಯೋ ಹಾಗೆ ಆಗಿದ್ದಾನೆ. ಕೆಂಡ ರೊಟ್ಟಿ ಪ್ರವೀಣನಾಗಿದ್ದಾನೆ.

ಧೋಂಡೂಬಾಯಿ ಎಲ್ಲೆಲ್ಲಿಂದಲೋ ಏನೇನನ್ನೋ ತರಿಸಿ, ತಿಂದು, ಎಲ್ಲೆಲ್ಲೋ ತೂಕ ಬೆಳೆಸಿಕೊಂಡು, ಹೇಗೇಗೋ ಆಗಿದ್ದಾಳೆ. ಎಲ್ಲೆಲ್ಲೂ ದುಂಡಾಗಿ ಉರುಳು ಸೇವೆಗೆ ಸಿದ್ಧಳಾಗಿದ್ದ ಆಗಿನ ಧೋಂಡೂಬಾಯಿ, ಪಾಪ! ಈಗ ಭಾರ ಸರಿಮಾಡಿ ಕೊಂಡು ನಡೆಯುಕ್ಕೊ ಪ್ರಯಾಸವಾಗ್ತಾ ಇದೆ.

—: o :—

ಬರ್ಮಾ ದೇಶದಿಂದ ಭಾರತವು ತ್ಯಾಗದ ಮರವನ್ನು ಕೊಂಡುಕೊಳ್ಳು ತ್ತಾರಂತೆ

—ಸ್ವಾತಂತ್ರ್ಯಕ್ಕೆ ಮುಂಚೆ ಅಲ್ಲಿಂದ ಅಕ್ಕಿ ತರಿಸುತ್ತಾ ಇದ್ದರು. ಇನ್ನು ಮೇಲೆ ತ್ಯಾಗದ ಹುಡೀಲಿ ಆಹಾರ ತಯಾರಿಸ್ತಾರೇನೋ?

ಗಾಂಪರ ಗುಂಪು

" ಅರೆ ಇಸ್ಕಿ—ಎಸ್ಕಲೇಟರ್ "

ಆಕಾಶಾತ್ ಪತಿತಂ ತೋಯಂ । ಯಥಾ ಗಚ್ಛತಿ ಸಾಗರಂ ॥
ಸರ್ವದೇವ ನಮಸ್ಕಾರಂ । ಕೇಶವಂ ಪ್ರತಿಗಚ್ಛತಿ ॥

—ಎಂಬಂತೆ ಈ ಪಿಕೆಡಿಲ್ಲಿ ಸರ್ಕಸ್ ನೆಲಮಾಳಿಗೆಯ ರೈಲು ನಿಲ್ದಾಣದಲ್ಲಿ ಎಲ್ಲೆಲ್ಲಿ ಹೋದರೂ ಮತ್ತೆ ಮಧ್ಯದ ಟಿಕೇಟು ಕೊಡುವ ಬೂತಿನ ಬಳಿಗೇ ಬಂದು ಸೇರುತ್ತಿದ್ದರು ಈ ಗುರು ಶಿಷ್ಯರು. ಆಗ ಸಂಜೆಯಾಗಿತ್ತು. ಆ ನೆಲಮಾಳಿಗೆಯ ರೈಲುನಿಲ್ದಾಣದಿಂದ ನಾಲ್ಕು ದಿಕ್ಕಿಗೂ ಮೆಟ್ಟಿಲು ಹರಡಿ ಎಲ್ಲೆಲ್ಲೂ ದೀಪಮಯವಾಗಿ ಪಾತಾಳರಾಜನ ರಾಜಧಾನಿಯಲ್ಲಿ ದೀಪಾವಳಿ ಉತ್ಸವವಿದ್ದಂತೆ ಪ್ರಜ್ವಲಿಸುತ್ತಿತ್ತು.

ಆ ಅಂಗಡಿಗಳು-ಜನಜಂಗುಳಿ-ಎಲ್ಲಿಗೆ ಹೊರಟಿತ್ತೊ, ಎಲ್ಲಿಂದ ಬಂದಿತ್ತೊ !

" ಮೊದಲೆ ಮಂಕ ! ಮೇಲೆ ಈ ಪಿಕೆಡಿಲ್ಲಿ ಪಾತಾಳನಗರ !! "—ಎಂದು ಹುಬ್ಬು ಹಾರಿಸಿದ ಮಡೆಯ. ಗುರುಗಳು ಮಾತ್ರ ತದೇಕ ಚಿತ್ತರಾಗಿ ಯಾವ ಶಿಷ್ಯ ಎತ್ತ ಎಳೆದರೆ ಅತ್ತ ನುಗ್ಗುತ್ತಾ, ತಬ್ಬಿಬ್ಬಾಗಿ ಕತ್ತಲಲ್ಲಿನ ಕುರುಡರಂತೆ ಈ ಜನಜುಂಗುಳಿಯ ರಂಗುರಂಗಿನ ಮಾಯಾಬಜಾರಿನಲ್ಲಿ ತಡಕಾಡುತ್ತಿದ್ದರು.

ಇದಕ್ಕೆಲ್ಲಾ ಕಾರಣ ದೊರಸಾನಿಯದು. ಆಕೆ ಮಧ್ಯಾಹ್ನದ ಊಟ ಮುಗಿಸಿ-ಅಯ್ಯೋ ನನ್ನ ಊಟವೇ—ಅದೆಂಥುದೋ ಲಯನ್ಸ್ ಕಾಫಿ ಅಂಗಡಿಯಂತೆ—ನೆಲ ಮಾಳಿಗೆಯಂತೆ ರಿಜೆಂಟ್ ರಸ್ತೆಯಲ್ಲಿ ಇಳಿಸಿ ಒಯ್ದಿದ್ದಳು ಆಕೆ. ಅಲ್ಲಿ ದೊಡ್ಡ ಕ್ಯೂ ನಿಂತಿತ್ತು, ಅದರ ಹಿಂದೆ ಇವರುಗಳು ನಿಂತರು. ಎಲ್ಲಕ್ಕೂ ಮುಂದೆ ದೊರೆ ಸಾನಿ ನಿಂತಿದ್ದಳು ; ಅವಳ ಹಿಂದೆ ಗುರುಗಳು ನಿಂತಿದ್ದರು. ಅದೊಂದು ಸ್ವಯಂ ಪರಿಚಾರಕ ಖಾನಾವಳಿ. ಮೊದಲೊಂದು ಪರಾತದಂತಹ ಅಲ್ಯೂಮಿನಿಯಂ ತಟ್ಟೆ ಎತ್ತಿಕೊಂಡರು. ಹಾಗೇ ಸಾಗಿದಾಗ ಸಾಲಾಗಿ ಫಲಹಾರದ ಪದಾರ್ಥಗಳನ್ನು ಪ್ರದರ್ಶನಕ್ಕೆ ಇಟ್ಟಂತೆ ಅಲಂಕರಿಸಿಟ್ಟಿದ್ದರು.

ಮಡೆಯನು " ಗುರೂಜೀ, ಇದರಲ್ಲಿ ಮೀನು-ಮತ್ಸ್ಯ-ಮಕರ-ಕಟಕಗಳನ್ನು ಬೇಯಿಸಿ ಕೇಕ್-ಪುಡ್ಡಿಂಗ್‌ಗಳನ್ನು ಮಾಡಿಲ್ಲವೆಂಬುದರ ಬಗ್ಗೆ ನಿಂತಿರುವ ಕನ್ಯೆ ಯನ್ನು ವಿಚಾರಿಸಿ " ಎಂದು ದ್ವಾದಶರಾಶಿಯ ಭಕರನಂತೆ ಕೇಳಿದ್ದ.

ಅಯ್ಯ ಮಡೆಯ, ನಮ್ಮ ನೆರವಿಗೆ ದೊರೆಸಾನಿ ಇಲ್ಲವೇ ? ನೀನೇಕೆ ವೃಶ್ಚಿಕ ದಂತೆ ಕುಟುಕುವಿ ? " ಎಂದಿದ್ದರು.

ದೊರೆಸಾನಿಯ ಹಿಂದೆ ನಿಂತ ಗುರುಗಳು ಕ್ಯೂದೆಸೆಯಿಂದಾಗಿ ಅವಳ ಬೆನ್ನಿಗೆ ತಮ್ಮ ಕೈಯನ್ನು ಊರಿಕೊಂಡಿದ್ದರು. ಮಡೆಯನು ತನ್ನ ಹಿಂದಿದ್ದ ಮಂಕನಿಗೆ ಕಿಂಚು ಮಾಡಿ " ಮೂರನೆ ಮನೆ " ಎಂದು ನಗು ನುಂಗಿಕೊಂಡಿದ್ದ.

ತಮ್ಮ ತಮ್ಮ ಸರದಿ ಬಂದಾಗ ರುಚಿಯಾಗಿರಬಹುದೆಂದು ಕಂಡದ್ದನ್ನೆಲ್ಲಾ ಪರಾತದಲ್ಲಿ ಪೇರಿಸಿಕೊಂಡು ಹಾಗೇ ನಡೆದುಬಂದಾಗ 'TEA OR COFFEE SIR' ಎಂದು ಹೆಣ್ಣೊಂದು ಕೇಳಿತ್ತು. 'ಹಿ ಹಿ! ಕೆಫೇ ಟೀ' ಎಂದು ಹೇಳಿದ್ದ ತಬ್ಬಿಬ್ಬಾಗಿ ಮಡೆಯು. ಆಕೆ ಟೀ-ಕಾಫಿಗಳನ್ನು ಬೆರಸಿಯೇ ಕೊಟ್ಟಿದ್ದಳು. ಕಡೆಗೆ ಒಂದು ಟೈಪ್‌ರೈಟರಿನಂಥಾ ಮಿಷಿನ್ನಿನ ಮುಂದೆ ಈ ಗಾಂಪರ ಗುಂಪು ತಟ್ಟೆಯಲ್ಲಿನ ಫಳಾರದೊಡನೆ ನಿಂತಿತು. ಆ ಚೂಪುಮೂಗಿನ ಮುದುಕ ತಟ್ಟೆಯನ್ನೆಲ್ಲಾ ಒಮ್ಮೆ ಸಿಂಹಾವಲೋಕಿಸಿ "ಟಕ್ಕ-ಡಡ-ಗದ ಗಡಿ ಟ್ರೊಂ" ಎಂದು ಆ ಮಿಷಿನ್ನನ್ನು ಸದ್ದು ಮಾಡಿಸಿ "Three and Six please" ಎಂದಿತು.

"ಯುಲ್ ಗುರ್ರೂಜೀ, ಮೂರು ಷಿಲಿಂಗ್-ಆರು ಪೆನ್ನಿ ಕಕ್ಕಿ" ಎಂದಳು ದೊರೆಸಾನಿ. ಹೀಗೇ "Two and Six", "One and Eleven" ಇತ್ಯಾದಿ, ಇತ್ಯಾದಿ ಅವರವರ ತಟ್ಟೆಗಳ ತಿನುಸುಗಳ ಮಟ್ಟಕ್ಕನುಸಾರವಾಗಿ ಪ್ರತಿಯೊಬ್ಬರಿಂದಲೂ ದುಡ್ಡು ತೆಗೆದುಕೊಂಡು ಪ್ರತ್ಯೇಕ ಥ್ಯಾಂಕ್ಸ್‌ಗಳನ್ನು ಕೊಟ್ಟ. ಎಲ್ಲರೂ ಜಾಗ ಹುಡುಕಿಕೊಂಡು ತಿನ್ನಲು ಕೂತರು.

"ಅಲ್ಲ ಗುರುಗಳೇ, ಆ ಮಿಷಿನ್ನು ನಾವು ಇಷ್ಟೇ ತಿಂಡಿ ಕೊಂಡೆವು ಅಂತ ಹ್ಯಾಗೆ ಕಂಡುಹಿಡಿಯುತ್ತೆ?" ಎಂದ ಮುಠ್ಠಾಳ.

"ನಿನ್ನ ತಲೆ! ಇಂಥಾ ಪ್ರಶ್ನೆ ಹಾಕಬಾರದು ಸುಮ್ಮನೆ ತಿನ್ನು" ಎಂದು ಸ್ಯಾಂಡ್‌ವಿಚ್ ಕಡಿದರು ಗುರೂಜಿ. ತಮಗೆ ತಿಳಿಯದ ಪ್ರಶ್ನೆ ಶಿಷ್ಯರು ಹಾಕಿದಾಗ ಗುರುಗಳು ಹೀಗೇ ಹೇಳುತ್ತಿದ್ದರು.

"ನಮ್ಮ ಅಂಗಡಿ ನಾಣಿ ಬರೆದು ಕೂಡಿ ಇಷ್ಟೊಂತ ಹೇಳ್ತಾನೆ. ಇಲ್ಲಿ ಆ ಮೆಷಿನ್ನು ಕೂಡಿ ಬರೆದು ಪ್ರಿಂಟಿಸುತ್ತೆ, ಅಷ್ಟೆ!" ಇದೇನು ಮಹಾ ಎಂದು ಮಂಕ ಮೂಗು ಮುರಿದ.

"ನೋಡಿ, ಈ ಲಯನ್ಸ್ ಕಾಫಿ ಮಂದಿರಗಳು ಬಹಳ ಸುಲುಭದ ಮತ್ತು ಕಡಿಮೆ ವೆಚ್ಚದ ತಿಂಡಿ ಹೋಟಲುಗಳು. ಇವು ಎಲ್ಲೆಲ್ಲೂ ಇವೆ. ದೊಡ್ಡ ಹೋಟಲುಗಳಿಗೆ ಹೋದರೆ ಬರೀ ಡೌಲು. ಇಷ್ಟೇ ತಿಂಡಿಗೆ ಇದರ ದುಪ್ಪಟ್ಟಿರಷ್ಟು ಬೆಲೆ ತೆರಬೇಕು. ದುಡ್ಡೂ ಹಾಳು, ತಲೆಯೂ ಬೋಳು" ಎಂದು ದೊರಸಾನಿ ಗುರು ಯುಲ್‌ಬ್ರಿನ್ನರ್ ತಲೆಯನ್ನು ಸವರಿದಳು. ಬ್ರೆಡ್ಡು-ಕೇಕು-ಪುಡ್ಡಿಂಗ್ ಅಂತೆ ಅವರ ತಲೆ ಆಲೂಗಡ್ಡೆ ಕೊಚ್ಚಿ ಬೇಯಿಸಿ ಮೆಣಸು ಹಾಕಿ ಉಪ್ಪು ಸುರಿದಿದ್ದರು. ಬೊಂಬಾಯಿ ಏಕೆ - ಬೆಂಗಳೂರಲ್ಲೇ ಹುಳಿ ತೊವ್ವೆ, ಮಜ್ಜಿಗೆ ಹುಳಿ, ಪುದೀನಾ ಚಟ್ನಿ ತಿಂದದ್ದು. ಆಗಲೇ ನಾಲ್ಕು ದಿನ ಹತ್ತಿರ ಹತ್ತಿರ ತಿಂದಿದ್ದು ಬಾಯಿ ಮಸಾಲೆ ಬೇಡುತ್ತಿತ್ತು. ಈ ಆಂಗ್ರೇಜಿ ಸಪ್ಪೆ ಬ್ರೆಡ್ಡು, ಈರುಳ್ಳಿ-ಮೆಣಸಿನ ಕಾಯಿ ತಿಂದ ನಾಲಿಗೆಗೆ ರುಚಿಸೀತೇ.

ಅಂತೂ ಮಧ್ಯಾಹ್ನದ ಊಟದ ಶಾಸ್ತ್ರ ಮುಗಿಸಿ ಅಂಗಡಿ ಬೀದಿ ಸುತ್ತಿ ಸುತ್ತಿ ಸಂಜೆ ಆದಾಗ ವಾಪಸ್ಸು ಹೋಟಲಿಗೆ ಹೊರಡುವುದೆಂದೂ, ಮರುದಿನ ವಿಜಯಲಕ್ಷ್ಮಿ

ಪಂಡಿತರ ಆಸ್ಪತ್ರೆಗೆ ಹೋಗಿ ಬಂದರಾಯಿತೆಂದೂ ದೊರೆಸಾನಿ ಸೂಚಿಸಿದಳು.

ಪಿಕೆಡೆಲ್ಲಿ ಸರ್ಕಸ್ಸಿನ ಸುತ್ತಲೂ ತಿರುಗಿದಾಗ ಅಲ್ಲಿನ ನಾಟ್ಯಭವನಗಳೂ, ಹೋಟಲುಗಳೂ, ಅಂಗಡಿಗಳೂ, ಒಂದೊಂದರ ಮುಂದೂ ಅರ್ಧ ತಾಸು ಕಳೆದು ಹೋಗಿ ಬರುವ ಹೆಣ್ಣುಗಳ ಅರೆತೆರೆದ ಅಂಗಪ್ರದರ್ಶನಕ್ಕೆ ಮಾರುಹೋಗಿ ಸುತ್ತಿ ಸುಸ್ತಾದಾಗ ಸಂಜೆಯೇ ಸರಿದು ಬಂದಿತ್ತು.

ಕಿನ್ನರ ರಾಜ್ಯದಲ್ಲಿ ಕಮಂಗಿಗಳಂತೆ ಕಂಗೊಳಿಸಿದರೂ, ಇವರು ಕೇವಲ ಕಿಮ್ಮತ್ತಿಲ್ಲದ ಜನ ಅನ್ನುವ ಹಾಗಿರಲಿಲ್ಲ. ಅವರವರ ಬೆಲೆ ಅವರವರಿಗೆ. ಒಮ್ಮೆಲೇ "ಡಿಂಗ್-ಡಾಂಗ್-ಡಂಗ್" ಎಂದು ಬಹು ಹಿತವಾದ ಘಂಟಾನಾದ ಕೇಳಿಬಂತು. ಪಿಕೆಡೆಲ್ಲಿ ಸರ್ಕಸ್ಸಿನಲ್ಲಿ ಎದ್ದುಕಾಣುವ ದೀಪಾಲಂಕೃತ ಗಡಿಯಾರ 'ಗಿನ್ನಿಸ್ ಟೈಂ' ಎಂಬುದು. ಈ ಬೃಹನ್ ಗಡಿಯಾರ 'ಕಕ್ಕೂ ಕ್ಲಾಕ್' ಜಾತಿಯದು. ಅರ್ಧ ಗಂಟೆಗೊಮ್ಮೆ ಗಡಿಯಾರದ ಮೇಲಿರುವ ಬಾಗಿಲು ತೆಗೆದುಕೊಳ್ಳುತ್ತದೆ. ಹೊರಗಡೆ ಗೊಂದು ದೊಡ್ಡ ಕೊಕ್ಕಿನ ಕಕ್ಕೂ ಹಕ್ಕಿ ಬಂದು ಆಚೆ ಈಚೆ ನೋಡಿ ಒಳಕ್ಕೆ ಹೋಗುತ್ತೆ. ಬಾಗಿಲು ಮತ್ತೆ ಮುಚ್ಚಿಕೊಳ್ಳುತ್ತದೆ. ಈ ಪವಾಡವನ್ನು ಕಂಡ ಗುರುಗಳೇ ಸ್ವಯಂ ಎರಡು ಘಂಟೆಗಳ ಕಾಲ ಎಡಬಿಡದೆ ಸರ್ಕಲ್ಲಿನ ಮಧ್ಯದ Shaftsbury Memorial ಕಾರಂಜಿಯ ನಡುವಿನ ಏರೋಸ್ (Eros) ವಿಗ್ರಹದ ಮುಂದೆ ನಿಂತು ನೋಡಿದರು.

"ಪ್ರಿಯ ದೊರಸಾನೀ, ಇದೇನು ಈ ರೆಕ್ಕೆ ಇರುವ ಹಕ್ಕಿ ಹಾರಾಡದೆ ಈ ಗಡಿಯಾರದ ನಡುವೆ ಸಿಕ್ಕಿಹಾಕಿಕೊಂಡು ಸಮಯಕ್ಕೆ ಸರಿಯಾಗಿ ಹೊರಬರುತ್ತಿದೆ ಯಲ್ಲಾ........ಆಶ್ಚರ್ಯ! ಪರಮಾಶ್ಚರ್ಯ!!"

"ಅದು ಯಾಂತ್ರಿಕ ಹಕ್ಕಿ ಪ್ರಿಯನೇ. ಗಿನ್ನಿಸ್ ಎಂಬ ಮಾದಕ ಮಧುವಿನ ಪ್ರಚಾರಕ್ಕಾಗಿ—ಅಂದರೆ ಎಲ್ಲ ಸಮಯವೂ ಗಿನ್ನಿಸ್ ಸಮಯವೇ"

"ಸದಾ ಕುಡೀತಿರಬಹುದೊಂತ್ಲೊ"—ಗುರೂಜಿ.

"ಈ ಜನಕ್ಕೆ ಕುಡಿಯೋದೇ ಕೆಲಸ, ರಾಮ ಇಲ್ಲ-ಕೃಷ್ಣ ಇಲ್ಲ" ಎಂದು ಮಡ್ಡಿ ಆಕಳಿಸಿದ. ದೊರಸಾನಿ ಪಿಕೆಡೆಲ್ಲಿ ನಡುವಿನ Eros ವಿಗ್ರಹದ ಬಗ್ಗೆ ಹೇಳಿದಳು: "ನೋಡಿ ಗಾಂಪರ್ ಯುಲ್‌ಬ್ರನ್ಸ್—ಈ ಮಧ್ಯೆ ಇದೆಯಲ್ಲ ಕಾರಂಜಿ, ಅದರ ಮೇಲಿನ 'Eros' ರೆಕ್ಕೆಯುಳ್ಳ ಮಾನವಾಕೃತಿ. ಅದು ಗ್ರೀಕರ ದೇವತೆ—God of Love ಪ್ರೇಮದೇವತೆ – ನೀವೇನನ್ನುತ್ತೀರಿ ಅದಕ್ಕೆ?"

"ಅದೇ ಮದನ...."—ಗುರೂಜಿ.

"ಮನ್ಮಥ"—ಮಂಕ.

"ಅನಂಗ"—ಮಡ್ಡಿ.

"ರತಿಪತಿ"—ಮುಠ್ಠಾಳ.

"ಸುಮಬಾಣ"—ಮಡೆಯ.

" ಅದೇ ನಮ್ಮ ಈಶ್ವರ ಹಣೆಗಣ್ಣು ಬಿಟ್ಟು ಸುಟ್ಟುಹಾಕಿದನಲ್ಲ—ಕಾಮಣ್ಣ-ಕಾಮಣ್ಣ....ಲಬೋ ಲಬೋ ಗುರುಗಳೇ....ಆ ಕಾಮಣ್ಣನಿಗೆ ' ಎರೋಸ್ ' ಅಂತ ಹೆಸರಿಟ್ಟು ಈ ಪಿಕೆಡೆಲ್ಲಿ ಸರ್ಕಲ್ ನಡುವೆ ಕೂಡ್ಸಿದ್ದಾರೋ....ಸರಿ ಸರಿ " ಎಂದು ಮರುಳ ಹೇಳಿದ.

" ಗುರುಗಳೇ, ಈ ವಿಚಾರ ನಾನು ಸ್ವಲ್ಪ ಫ್ರಾಂಕ್ ಆಗಿ ಫಂಕ್ ಆಗದೆ ಹೇಳಿಬಿಡ್ಲೆ ? "—ಮಂಕ.

" ಬೊಗಳು ಬೇಗ ಭಡವಾ...."

" ಈ ರಂಗುರಂಗಿನ ಹೊಂಬಣ್ಣದ ಬೆಳಕಿನ ನಡುವೆ ಈ ಕಾಮಣ್ಣನ ವಿಗ್ರಹ ಇರೋದು ಸೂಕ್ತವಾಗೇ ಇದೆ. ನಮ್ಮ ದೊರಸಾನಿ ಅಮ್ಮನೋರು ಅಪ್ಪಣೆ ಕೊಡ್ಸಿದ ಹಾಗೆ, ಈ ಪಿಕೆಡೆಲ್ಲಿ ಸುತ್ತಮುತ್ತ ರಸಿಕತೆ ಹೆಚ್ಚೆಂದೂ, ನಾಟ್ಯಗೃಹ, ಪಾನೀಯ ಗೃಹ, ಮತ್ತೆ ಹೆಣ್ಣು ಗಂಡುಗಳು ತಮ್ಮ ಅತೃಪ್ತ ಅಂತರಂಗದ ಆಸೆ-ಆಕಾಂಕ್ಷೆಗಳಿಗೆ ತೃಪ್ತಿಯ ನೀರೆರೆಯುವ ಮಂದಿರಗಳು ಈ ಪ್ರದೇಶದಲ್ಲೇ ಹೆಚ್ಚೂಂತಂದೂ ಹೇಳಿದ್ದು ಈ ಕಾಮಣ್ಣನ ವಿಗ್ರಹ ಇಲ್ಲಿ ಇರೋದು ಬಹು ಸೂಕ್ತವಾಗಿದೆ—ಹರಿ ಓಂ ಸುಸ್ತು " ಎಂದು ವದರಿದ ಮಂಕ.

" ಆದರೂ ಮಂಕಯ್ಯ, ಒಂದು ಮುಖ್ಯ ವಿಚಾರ ಯೋಚನೆ ಮಾಡಬೇಕಾಗಿದೆ. ಅದೇನೆಂದರೆ ಈ ಕಾಮಣ್ಣನ ವಿಗ್ರಹ ಇಲ್ಲಿ ನೆಟ್ಟಮೇಲೆ ಈ ಪ್ರಾಂತ್ಯ ಹೀಗೆ ಕಾಮಕೇಳಿಯ ಕೇಕೆ ಪ್ರದೇಶವಾಯಿತೋ ಅಥವ ಈ ಪ್ರದೇಶ ಹೀಗಾದ್ದರಿಂದ ಇದನ್ನು ಪ್ರತಿಷ್ಠಾಪಿಸಿದರೋ ಎನ್ನುವುದು "—ಎಂದು ಹೇಳಿದ ಮರುಳ.

—ಹೀಗೆ ಗಾಂಪರಗುಂಪು ಆಧ್ಯಾತ್ಮಿಕ ವಿಚಾರಧಾರೆಯಿಂದ ಮತ್ತೆ ಕಾಮಣ್ಣನ ಹಬ್ಬದ ಕಡೆ ಮಾತು ಹರಿಬಿಟ್ಟಿತ್ತು. ಈ ಗಲಾಟೆಯಲ್ಲಿ ದೊರಸಾನಿ ಕೈಯ್ಯಲ್ಲಿನ ಗಡಿಯಾರ ನೋಡಿಕೊಂಡು " ಹೊತ್ತಾಯ್ತು ನಾನು ಹೊರಡಲೇಬೇಕು " ಎಂದು ಆತುರ ತೋರಿಸಿದಳು.

" ಅಮ್ಮಾ ದೊರಸಾನವ್ವಾ, ಈ ಅನಂಗನಗರಿಯಲ್ಲಿ ನೀನು ಕೈಬಿಟ್ಟರೆ ನಾವು ಕಳೆದೇಹೋದೇವು. ನಮ್ಮನ್ನು ಪುನಶ್ಚ ಹೋಟಲು ಸೇರಿಸಿಬಿಡು ; ನಾಳೆ ಮತ್ತೆ ಮುಂಜಾನೆ ಬರುವಂತೆ " ಅಂದರು ಗುರುಗಳು.

" ಪಿಕೆಡೆಲ್ಲಿ ಟ್ಯೂಬ್ ಸ್ಟೇರ್ಷ ಇಲ್ಲೇ ಇದೆ. ಅದರಲ್ಲಿ ಹೋಗಿ ಪಿಕೆಡೆಲ್ಲಿ ಲೈನ್ ಹಿಡಿದರೆ ನೇರ ರಸಲ್ ಸ್ಕ್ವಯರ್‌ಗೆ ಹೋಗುತ್ತೀರಿ. ಅಲ್ಲಿಂದ ಹೋಟಲು ದಾರಿ ಗೊತ್ತಿಲ್ಲವೆ?....ಡಿಯರ್ ಯುಲ್‌ಬ್ರೆನ್ನರ್, ನಾನು ಅರ್ಜೆಂಟಾಗಿ ಒಬ್ಬ ಸ್ನೇಹಿತೆನ್ನ ಕೆಂಬ್ರಿಡ್ಜ್ ರಸ್ತೇಲಿ ನೋಡಬೇಕು—"

—ಎಂದೆನ್ನುತ್ತಿದ್ದಂತೆ ಅವಳು ಕೈಚೀಲ ಹುಡುಕಿದಳು. ಸಿಗರೇಟು ಆಗಿ ಹೋಗಿತ್ತು. ಹಾಗೇ ಸುತ್ತಲೂ ನೋಡಿಳು .." ಬನ್ನಿ " ಎಂದು ಪಿಕೆಡೆಲ್ಲಿ ಪಾತಾಳ ರೈಲ್ವೆ ಸ್ಟೇಷನ್‌ಗೆ ಇಳಿದು ಅಲ್ಲಿಯೇ ಇದ್ದ ಒಂದು ಆಟೋಮಾಟಿಕ್ ಸಿಗರೇಟ್ ಮಿಷಿನ್ನಿನ ಗೊಲಕದಲ್ಲಿ ದೊರಸಾನಿ ಎರಡು ಷಿಲಿಂಗ್ ನಾಣ್ಯವನ್ನು ಹಾಕಿದಳು.

ಒಂದು ಗುಂಡಿ ಒತ್ತಿದಳು. ಕ್ಷಣದಲ್ಲಿ ಒಂದು ಸಿಗರೇಟ್ ಪ್ಯಾಕೂ ಅದರ ಪಕ್ಕದ ಖಾನಿಯಿಂದ ಬರಬೇಕಾದ ಉಳಿದ ಚಿಲ್ರೆಯೂ ಬಂದಿತು.

" ಅಲಲಲ....ಏನು ಚಮತ್ಕಾರ ಇದು ! ಬರೇ ರೈಲ್ವೆ ತಿಕೀಟಿಗೇಂತ ಇದ್ದೆ—ಸಿಗರೇಟಿಗೂ ಮಿಚಿನ್ನೂ...." ಎಂದು ಡಂಗುಬಡಿದ ಡಿಂಗರಿಗನಂತೆ ಹುಬ್ಬು ಏರಿಸಿದ ಮಡೆಯ.

" ಬೈಬೈ, ನೀವು ಹೊರಡಿ, ನಾನು ಬರುವೆ" ಎಂದು ಗುರುಗಳ ನೆತ್ತಿಗೆ ಮುತ್ತಿಕ್ಕಿ ದೊರಸಾನಿ ಈ ಗಾಂಪರ ಗುಂಪನ್ನು ಮಾಯಾಬಜಾರದಂತಹ ಜಗತ್ತಿಗೇ ಅತಿ ದೊಡ್ಡ ಪಿಕೆಡೆಲ್ಲಿ ಅಂಡರ್‌ಗ್ರೌಂಡ್ ಸ್ಟೇಷನಲ್ಲಿ ಬಿಟ್ಟು ದಂ ಎಳೆದು ಹೊಗೆ ಊದುತ್ತಾ ಹೊರಟೇ ಹೋದಳು.

ಪರದೇಶಿಗಳಂತೇ ಆಗಿದ್ದರು ಈ ಗಾಂಪರು. ಹಾಳಾದ್ದು ಈ ಪಿಕೆಡೆಲ್ಲಿ ಸ್ಟೇಷನ್ನು ಬಲು ಮೋಸದ್ದು. ಸರಿಯಾಗಿ ಜಾಡು ತಿಳಿಯದಿದ್ದರೆ ಎತ್ತ ತಿರುಗ ಬೇಕೋ, ಎಲ್ಲಿ ಹೋಗಬೇಕೋ ಅರ್ಥವಾಗುವುದಿಲ್ಲ. ಅಂತೂ ಒಬ್ಬ ಭಾರತೀಯ ಕಂಡ—" ಅರೆ ! "—ಮಂಕ.

" ಹಾಂ !! "—ಮಡೆಯ.

" ಓ !!! "—ಮರುಳ.

" ಗುರುಗಳೇ ! ಘಾ....ಘ-ಘಾ ಗುರುಗಳೇ "—ಎಂದು ಕೂಗಿದ ಮುಠ್ಠಾಳ. ಗುರುಗಳು ಹಾಗೇ ನೋಡಿದರು. ತಮ್ಮ ಊರಿನವನೇ ಆ ವ್ಯಕ್ತಿ ಎಂದು ತಿಳಿದು ಅವನನ್ನೆ ಬೇಗ ಬೇಗ ಹಿಂಬಾಲಿಸುವಂತೆ ಹೇಳಿದರು. " ಲೋ, ಘಾ ನಿಲ್ಲಮ್ಮಾ" ಎಂದು ಕೂಗಿದ ಮರುಳ. ದೊಡ್ಡ ಕನ್ನಡಕದ - ಫಿಲ್ಟರ್ ಮೀಸೆಯ - ಡಬ್ಬಲ್ ಬ್ರೆಸ್ಟ್ ಟೂ ಅಂಡ್ ಹಾಫ್ ಪೀಸ್ ಸೂಟಿನಲ್ಲಿದ್ದ ಆ ಭಾರತೀಯ ಬಂಧು ನಿಂತು ನೋಡಿದ. ಆದರೆ ಮರುಕ್ಷಣವೇ ಮತ್ತೆ ಕತ್ತು ತಗ್ಗಿಸಿ ಟಿಕೇಟು ಭೂತಿಗೆ ನಡೆದು ಎಲ್ಲಿಗೊ ಒಂದು ಟಿಕೆಟ್ ಕೊಂಡ. ಗಾಂಪರೊಡೆಯರೂ ರಸೆಲ್ ಸ್ಕ್ವಯರ್ರ್ರಿಗೆ ಟಿಕೆಟ್ಟು ಕೊಂಡರು. ಆ ಚಿರಪರಿಚಿತ ' ಘಾ ' ಘನವಂತನನ್ನು ಸರಸರನೆ ಆ ನೈಲಾನು ಲೈಟಿನಲ್ಲಿ ಹಿಂಬಾಲಿಸಿದರು.

ಆ ವ್ಯಕ್ತಿ ನಿಂತು ನೋಡಿತು. ಎದುರಿಗೆ ಮೆಟ್ಟಲುಗಳು ಹರಿದು ಹೋಗು ತ್ತಿದ್ದವು. ' ಘ ' ಅದರ ಮೇಲೆ ನಿಂತು ಕೆಳಕ್ಕೆ ಹರಿದುಹೋದ.

" ಗುರುಗಳೇ, ಇದು ನೋಡಿ ವಿಚಿತ್ರ ! ಈ ಮೆಟ್ಟಲುಗಳು, ನಾವು ಇಳಿದು ಹೋಗುವ ಗೋಜಿಲ್ಲ ; ಅವೇ ಇಳಿದು ಹೋಗುತ್ತಿವೆ. ಗುರುಗಳೇ ಆ ವ್ಯಕ್ತಿ ನಮ್ಮೂರು ' ಘಾ '. ಇಲ್ಲಿ ಏನೂ ತಿಳೀದವನಂತೆ ರೋಫಾಗಿ ಹೋಗ್ತಿದ್ದಾನೆ...."

—ಎಂದು ಎಲ್ಲರೂ ಎಸ್ಕಲೇಟರ್ ಮೆಟ್ಟಲುಗಳ ಮೇಲೆ ನಿಂತರು. ಅವರು ಇಳಿದು ಹೋಗುತ್ತಿದ್ದಂತೇ ಪಕ್ಕದಲ್ಲಿದ್ದ ಮಗ್ಗುಲ ಎಸ್ಕಲೇಟರಿನಿಂದ ' ಘಾ ' ಹತ್ತಿ ಬರುತ್ತಿದ್ದ. ಗಾಂಪರ ಗುಂಪನ್ನು ನೋಡಿ ನಕ್ಕ. " ಗುರುಗಳೇ, ' ಘಾ ' ನೋಡಿ ಮತ್ತೆ ಹತ್ತುತ್ತಿದ್ದಾನೆ"

ಹೀಗೆ ಗಾಂಪರ ಗುಂಪೂ, 'ಫಾ' ಎಂಬುವನೂ ಒಂದೇ ಸಮ ಎಸ್ಕಲೇಟರಿನಲ್ಲಿ ಒಮ್ಮೆ ಹತ್ತಿ ಒಮ್ಮೆ ಇಳಿದು ಕಣ್ಣುಮುಚ್ಚಾಲೆ ಆಟ ಆಡುವವರಂತೆ ಮೇಲೆ ಕೆಳಗೆ ಏರಿ ಇಳಿದರು. ಈ ಎಸ್ಕಲೇಟರ್ ಎಂಬುದು ಪ್ರಯಾಣಿಕರಿಗೆ ಅನುಕೂಲವಾಗಲೆಂದು ರೈಲ್ವೆಯವರು ನಿರ್ಮಿಸಿರುವ ದೊಡ್ಡ ಚಲನ ಸೋಪಾನಗಳು. ಭಾರಿ ಮೋಟಾರುಗಳನ್ನು ಜೋಡಿಸಿ ಒಮ್ಮೆಲೆ ನೂರಾರು ಮಂದಿ ಒಬ್ಬರ ಹಿಂದೊಬ್ಬರು ಈ ಎಸ್ಕಲೇಟರ್‌ನಲ್ಲಿ ಮೇಲಿಂದ ಕೆಳಗೆ, ಕೆಳಗಿಂದ ಮೇಲೆ ಸಾಗಿಹೋಗಬಹುದು.

ಈ 'ಫಾ' ಎನ್ನುವ ಮನುಷ್ಯ ಗಾಂಪರ ಊರಿನವನೇ. ಅವನು ಏಕೆ ಇಂಗ್ಲೆಂಡಿಗೆ ಬಂದಿದ್ದ ಎಂಬುದು ಅವನಿಗೇ ತಿಳಿದಿರಲಿಲ್ಲ. 'ಫಾ'ನಿಗೆ–ಕ್ಷಮಿಸಬೇಕು. ಇವನಿಗೆ 'ಫಾ' ಅಂತ ಏಕೆ ಹೆಸರು ಬಂತು? ಇವನ ನಿಜನಾಮಾಂಕಿತವೇನು ಎಂಬುದನ್ನು ಶ್ರೀಕೃಷ್ಣನೇ ಬಲ್ಲ. ಆದರೆ ಗಾಂಪತನದಂತೆ 'ಫಾ' ತನವೂ ಒಂದು ವಿಶಿಷ್ಟವಾದ 'ತನ'. ಗಾಂಪರೂ ಈ ಫಾನೂ ಸೇರಿದ್ದು ಬೇವಿನೆಣ್ಣೆಗೆ ಕ್ವಿನೈನ್ ಗುಳಿಗೆ ಸೇರಿದಂತಿತ್ತು.

ಗಾಂಪರಿಗೆ ಈ ಮಹರಾಯ 'ಫಾ'ನನ್ನು ಹಿಡಿದು ಇಲ್ಲೆಲ್ಲಾದರೂ ನಮ್ಮೂರಿನ ಊಟ ಸಿಕ್ಕುತ್ತದೆಯೇ ಎಂದು ವಿಚಾರಿಸಬೇಕಾಗಿತ್ತು. ಆದರೆ ನಿರ್ಲಿಪ್ತನಂತೆ ಎಸ್ಕಲೇಟರಿನ ಮೇಲೆ ಹತ್ತಿ ಕೆಳಗೆ ಇಳಿಯುವುದರಲ್ಲೇ ತಲ್ಲೀನನಾಗಿದ್ದ ಈ ಫಾನನ್ನು ಹಿಡಿಯುವ ನೆಪದಲ್ಲಿ ಗಾಂಪರ ಗುಂಪೂ ಎಸ್ಕಲೇಟರಿನಲ್ಲಿ ಆಟ ಆಡಿದರು. ಗಾಂಪರ ಗುರುಗಳು ಈ ಶಿಷ್ಯರೊಡನಾಡಿದ್ದು ಸಾಕಾಗಿ ಒಂದು ಸಲ ಕೆಳಗೇ ನಿಂತಿದ್ದರು. "ಇಳಿದು ಬಾ 'ಫಾ'ನೆ–ಇಳಿದು ಬಾ" ಎಂದು ಅವನು ಇಳಿಯುವುದನ್ನೇ ಕಾದು ನಿಂತಿದ್ದು ಒಮ್ಮೆ ಅವ ತದೇಕ ಚಿತ್ತನಾಗಿ ಇಳಿದು ಬಂದಾಗ ಗಕ್ಕನೆ ಅವನ ಕಾಲರ್ ಹಿಡಿದು ನಿಲ್ಲಿಸಿದರು

"ಅರೆ ಇಸ್ಕಿ....ಓ ಎಸ್ಕಲೇಟರ್"

"ನಿಲ್ಲಲೇ ...ನೀನು ಷಡ್‌ನಲ್ಲಿರಲಿಲ್ಲೇನೂ ಫಾ?"

"ಹೌದು ಸಾರ್"

"ಮತ್ತೆ ನಿಂತು ಮಾತಾಡು. ಲಂಡನ್ನಿಗೆ ಬಂದೇಂತ ನೀನು ಬುದ್ಧಿವಂತನಾಗಿಬಿಟ್ಟೇಂತ ತಿಳೀಬೇಡ...."

"ನನಗ್ಗೊತ್ತು ರೀ....ನನ್ನ ಪಾಡಿಗೆ ನಾನು ಎಸ್ಕಲೇಟರ್ ಆಟ ಆಡ್ತಿದ್ರೆ ನೀವ್ಯಾಕೆ ನನ್ನ ಬೆನ್ನು ಹತ್ತಿ ಸತಾಯಿಸಬೇಕು"

"ಮಿಸ್ಟರ್ ಫಾ—ಹೋಲ್ಡ್ ಯುವರ್ ಟಂಗ್" ಎಂದು ಜಬರದಸ್ತಿ ಮಾಡಿದಾಗ ಫಾ ತೆಪ್ಪಗೆ ನಿಂತ. ಈ ಸಮಯಕ್ಕೆ ಶಿಷ್ಯರೆಲ್ಲಾ ಬಂದು ಸುತ್ತುಗಟ್ಟಿದ್ದರು.

ಮರುಳನಿಗೆ ಈ 'ಫಾ'ನ ಸ್ನೇಹ ಇತ್ತು. ಅವನೇ ಗುರುಗಳಿಗೆ ಇವನ ವಿಷಯ ಹೇಳಿದ್ದು. ಮರುಳ ಘಟ್ಟಿಯಾಗಿ ಅವನ ಬೆನ್ನಿಗೆ ಗುದ್ದಿ "ಲೋ, ಫಾ.... ಇಲ್ಲಿದ್ದೀನೀಂತ ನನಗೆ ಹೇಳಬೇಡವೇನೋ ಲೋ...."

“ ನೀವು ಬರ್ತೀರೀಂತ ನನಗೆ ಹೇಳಬೇಡವಾ ”

“ ಇಲ್ಲೇನು ಮಾಡ್ತಿದ್ದಿಯೋ ? ”

“ ಬೇಡ ಬೇಡಾಂದ್ರೂ ನನ್ನ ಮಾವ ಸ್ಕಾಲರ್‌ಷಿಪ್ ಕೊಡ್ಸಿ ಇಲ್ಲಿಗೆ ಅಟ್ಟಿದ್ದಾರೆ. ರಿಸರ್ಚ್ ಮಾಡಬೇಕಂತೆ.. ಎರಡು ಪೆನ್ನಿ ಈ ಸ್ಟೇಷನ್ನಲ್ಲಿ ಕಳೆದದ್ದನ್ನೇ ನಾನು ರಿಸರ್ಚ್ ಮಾಡುತ್ತಿದ್ದುದು. ಎಸ್ಕಲೇಟರ್ ಮೇಲೆ ಬಿದ್ದುಬಿಟ್ಟಿತ್ತು. ನಿತ್ಯ ಸಂಜೆ ಬಂದು ಇಲ್ಲಿ ಆ ಪೆನ್ನಿನ ರಿಸರ್ಚ್ ಮಾಡ್ಕೊಂಡು ಹೋಗ್ತಿದ್ದೀನಿ ”

“ ಹ ಹ್ಹ....ಸೂಜಿ ಹುಡುಕಿದ ಮುದುಕಿ ಹಾಗೇ....ಲೋ ನೀನು ನಮ್ಮ ಮಠದವನೇ ಬಿಡು. ಎಲ್ಲಿದ್ದಿಯೋ ? ”

“ ರೂಮು ಮಾಡ್ಕೊಂಡು ಸ್ವಿಸ್ ಕಾಲೇಜ್ ಹತ್ತಿರ ಇದ್ದೀನಿ ”

“ ಅಂಥಾಗೇ ರಾಸ್ಕಲ್, ನಿನಗೆ ಗೊತ್ತಿರಬೇಕು....ಗುರುಗಳಿಗೆ ಹುಳಿ-ಅನ್ನ-ಉಪ್ಪಿನಕಾಯಿ-ಪುದೀನ ಚಟ್ನಿ ಬೇಕಂತೆ....ಎಲ್ಲಿ ಸಿಕ್ಕುತ್ತೊ ಇಲ್ಲೀ ? ”

“ ಇಂಡಿಯಾ ಕ್ಲಬ್ ಅಂತ ಒಂದಿದೆ ”

“ ಎಲ್ಲಿ ? ”

“ ಟ್ರಫಾಲ್ಗರ್ ಸ್ಕ್ವಯರ್ ಹತ್ರ....ಅಲ್ಲಿ ಇಡ್ಲಿ-ಸಾಂಬಾರ್, ಮಸಾಲೆ ದೋಸೆ, ಮಜ್ಜಿಗೆ ಹುಳಿ ವಿಶಿಷ್ಟವೂ ಸಿಕ್ಕತ್ತೆ ”

“ ಹೌದೆ !! ”—ಗುರುಗಳು ದೇವರು ಪ್ರತ್ಯಕ್ಷವಾದಾಗ ಮುಖ ಮಾಡಿದಂತೆ ಮಾಡಿದರು.

“ ಒಂದು ಮಸಾಲೆಗೆ ಒಂದೂಕಾಲು ರೂಪಾಯಿ — ಊಟಕ್ಕೆ ಎರಡು ರೂಪಾಯಿ—ಹೊಟ್ಟೆ ಅರ್ಧ ತುಂಬೋಕೆ ಎಂಟು ರೂಪಾಯಿ ಬೇಕು ...ದುಡ್ಡು ತಿಂದಹಾಗೇ ಆಗತ್ತೆ ”

“ ಆದ್ರೂ ಚಿಂತಿಲ್ಲ. ಎಲವೋ ಶಿಷ್ಯಂದಿರಾ, ದಿನಾ ಒಪ್ಪತ್ತು ಊಟ ಮಾಡಿ ಬಿಡಿ ...ಬೇರ‍್ಯಾವುದಕ್ಕೂ ಖರ್ಚು ಮಾಡಬೇಡಿ. ನನಗೆ ಊಟ ಬೇಕು ” ಎಂದು ಗಾಂಪರು ಆಜ್ಞೆ ಮಾಡಿದರು.

‘ ಘಾ ’ನು ಇದ್ದಕ್ಕಿದ್ದಂತೆ ಠಣಕ್ಕನೆ ಎಸ್ಕಲೇಟರ್ ಮೇಲೆ ಹಾರಿ ಸರಸರನೆ ಹತ್ತಿ ಹೊರಕ್ಕೆ ಹೋಗಿ ಜನಜುಂಗುಳಿಯಲ್ಲಿ ಮಾಯವಾಗಿ ಹೋದ. ಕೂಸನ್ನು ಕಳೆದುಕೊಂಡ ತಾಯಿಯಂತೆ ಅತ್ತರು. “ ಅಯ್ಯೋ ಘಾ—ಹೋಟ್ಲು ಸಾಂಬಾರ್ ತೋರಿಸ್ದೆ ಹೋದ್ಯಲ್ಲೋ ” ಎಂದು ಅತ್ತರು. ಅಂತೂ ಇಂತೂ ಮತ್ತೆ ಹೋಟಲು ಸೇರಿದಾಗ ರಾತ್ರಿ ಹತ್ತಾಗಿತ್ತು.

—ದಾಶರಥಿ ದೀಕ್ಷಿತ್

ರಂಗು ಬಳಿಯಿರಿ!

ರಂಗು ಬಳಿಯಿರಿ!!

ಮರಕ್ಕೆ

ರಂಗು ಬಳಿಯಿರಿ!!!



ಇದು ತನ್ನದೇ ವಿಶಿಷ್ಟ ಗುಣದಿಂದ ಕೂಡಿರುವ, 50 ವರ್ಷಕ್ಕೂ ಮಿಕ್ಕಿದ ಖ್ಯಾತಿಯುಳ್ಳ, ಕಲಸಿ ತಯಾರಾಗಿಯೇ ಇರುವ ರಂಗು, ಕಾರಣ—

- ಇದು ಅತ್ಯುತ್ತಮ ರೀತಿಯಲ್ಲಿ ತಯಾರಿಸಲ್ಪಟ್ಟಿರುವುದಲ್ಲದೆ ಇದರಲ್ಲಿ ಸ್ಥಿತಿಸ್ಥಾಪಕ ಮತ್ತು ಬಾಳ್ವಿಕೆಯ ಗುಣಗಳಿಂದೊಳಗೊಂಡ ವಿಶಿಷ್ಟ ವಾರ್ನಿಶ್ ಇದೆ;

೨ ಮೇಲ್ಮೈಯು ಗಟ್ಟಿಯಾಗಿಯೂ, ಥಳಥಳಿಸುವಂತೆಯೂ ಮಾಡುವುದು;

೩ ಒಳಭಾಗ ಮತ್ತು ಹೊರಭಾಗ ಇವೆರಡಕ್ಕೂ ಬಳಿಯಲು ಉಪಯುಕ್ತವಾದುದು;

೪ ಮತ್ತು 26 ವಿವಿಧ ಬಣ್ಣಗಳಲ್ಲಿ ದೊರೆಯುವುದು

ಸಂಪೂರ್ಣ ಮಾಹಿತಿಬಗ್ಗೆ ನಮ್ಮ ಡಾಟಾ ಶೀಟ್ ನಂ. ಡಿ. ಎಸ್. 1/3/60ಯ ಸಲುವಾಗಿ ಪೋ. ಬಾ. ನಂ. 68, ಕಲ್ಕತ್ತ-1ಕ್ಕೆ ಬರೆಯಿರಿ.

SHALIMAR PAINT

ಶಾಲಿಮಾರ್ ಸೂಪರ್‌ಲ್ಯಾಕ್ ಸಿಂಥೆಟಿಕ್ ಎನಾಮೆಲ್

ತಯಾರಕರು

JWTSPW 615 KN


For 3 way Beauty Treatment....
RAJA
SNOW
AMLA
Kasturi Soap
MANYAM & CO
RAJA
SNOW
AMLA HAIR OIL , KASTURI SOAP
MANYAM & CO BANGALORE MADRAS MADURAI BOMBAY
FAS

REG. NO. B. G. 343 KORAVANJI DEC. 1961.

Printed by B. S. Iyengar, Bangalore City

Publisher—B. N. Gupta Editor—M. Sivaram.